Volume : 9 | Issue : 165 | September : 17 : 2026 : Thursday
ಸಂಪುಟ : 9 | ಸಂಚಿಕೆ : 165 | ಸೆಪ್ಟೆಂಬರ್ : 17 : 2026 : ಗುರುವಾರ

www.VIKRAMAVAHINI.com
ಸತ್ಯದ ಹಾದಿ । ಜನಪರ ದನಿ । ರಾಷ್ಟ್ರೀಯ ದೃಷ್ಟಿ



# ವಿಕ್ರಮ ವಾಹಿನಿ

ಪುಟ 4 ₹2 || ಕನ್ನಡ ದಿನಪತ್ರಿಕೆ ||
VIKRAMA VAHINI
PRGI NO: KARKAN/2018/78481



ಸತತ ಮೂರು ಚಿತ್ರಗಳ ಯಶಸ್ಸಿನ ಬೆನ್ನಲ್ಲೇ ನಟಿ ಮಮಿತಾ ಬೈಜು ಐಎಂಡಿಬಿಯ ಭಾರತ ಟ್ರೆಂಡಿಂಗ್ ಪೀಪಲ್ ಪಟ್ಟಿಯಲ್ಲಿ ಮೊದಲ ಸ್ಥಾನ ಪಡೆದಿದ್ದಾರೆ. ಅವರ ಇತ್ತೀಚಿನ ಮೂರು ಚಿತ್ರಗಳು ಒಟ್ಟಾರೆ ಸುಮಾರು ರೂ ೮೦೦ ಕೋಟಿ ಜಾಗತಿಕ ಗಳಿಕೆ ದಾಖಲಿಸಿರುವುದು ವಿಶೇಷ.

ಖಂಡ್ರೆ ಕನಸು ನನಸು: ಇಂಚೂರು ವೃಕ್ಷೋದ್ಯಾನದ ನೋಟವೇ ಸೊಗಸು ಪುಟ 2

‘ಹರಿಪ್ರಸಾದ್ ಹೇಳಿಕೆ ದೇಶದ್ರೋಹದ ಕೆಲಸ’ ಪುಟ 4

■ ಸುದ್ದಿ ಚುಟುಕು

## ಯುಪಿಐಗೆ ಶುಲ್ಕ: ಸುಪ್ರೀಂನಲ್ಲಿ ಪಿಐಎಲ್

● ವಿಕ್ರಮ ವಾಹಿನಿ । ನವದೆಹಲಿ

ರೂ 2,000ಕ್ಕಿಂತ ಹೆಚ್ಚಿನ ಮೊತ್ತದ ವ್ಯಕ್ತಿಯಿಂದ ವ್ಯಾಪಾರಿಗೆ (P2M) ನಡೆಯುವ ಯುಪಿಐ ವಹಿವಾಟುಗಳಿಗೆ ಶೇ.0.4ರಷ್ಟು ಮರ್ಚೆಂಟ್ ಡಿಸ್ಕೌಂಟ್ ರೇಟ್ (MDR) ವಿಧಿಸುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ (PIL) ಸಲ್ಲಿಸಲಾಗಿದೆ.

ವಕೀಲ ಅಂಜನ್ ದತ್ತಾ ಸಲ್ಲಿಸಿರುವ ಅರ್ಜಿಯಲ್ಲಿ, ಸೂಕ್ತ ಶಾಸನಬದ್ಧ ರಕ್ಷಣೆ, ಪಾರದರ್ಶಕತೆ ಹಾಗೂ ಸಾರ್ವಜನಿಕ ಸಮಾಲೋಚನೆಯಿಲ್ಲದೆ ಹೊಸ ಶುಲ್ಕ ವ್ಯವಸ್ಥೆ ಜಾರಿಗೆ ತರಲಾಗಿದೆ ಎಂದು ಆಕ್ಷೇಪಿಸಲಾಗಿದೆ.

**ರೂ 2,000ವರೆಗೆ ಶುಲ್ಕವಿಲ್ಲ**

ಸೆ.14ರಂದು ಹೊರಡಿಸಲಾದ ಕೇಂದ್ರ ಸರ್ಕಾರದ ಅಧಿಸೂಚನೆ ಹಾಗೂ ಸೆ.15ರಂದು ಪ್ರಕಟಿಸಲಾದ ಎಂಡಿಆರ್ ನಿಯಮವನ್ನು ಅರ್ಜಿಯಲ್ಲಿ ಪ್ರಶ್ನಿಸಲಾಗಿದೆ. ಈ ನಿಯಮ ಅಕ್ಟೋಬರ್ 15ರಿಂದ ಜಾರಿಗೆ ಬರಲಿದೆ ಎಂದು ಅರ್ಜಿದಾರರು ತಿಳಿಸಿದ್ದಾರೆ.

ಹೊಸ ವ್ಯವಸ್ಥೆಯಡಿ ರೂ 2,000ವರೆಗೆ ನಡೆಯುವ ಯುಪಿಐ ಪಾವತಿಗಳಿಗೆ ಎಂಡಿಆರ್ ಇರುವುದಿಲ್ಲ. ಆದರೆ ರೂ 2,000ಕ್ಕಿಂತ ಹೆಚ್ಚಿನ ವ್ಯಕ್ತಿಯಿಂದ ವ್ಯಾಪಾರಿಗೆ ನಡೆಯುವ ವಹಿವಾಟುಗಳಿಗೆ ಶೇ.0.4ರಷ್ಟು ಶುಲ್ಕ ವಿಧಿಸಲಾಗುತ್ತದೆ.

**ರೂ 75 ಸಾವಿರಕ್ಕೆ ರೂ 300 ಮಿತಿ**

ಅರ್ಜಿಯ ಪ್ರಕಾರ, ರೂ 2,000ಕ್ಕಿಂತ ಹೆಚ್ಚಿನ ವಹಿವಾಟುಗಳಿಗೆ ಶೇ.0.4ರಷ್ಟು ಎಂಡಿಆರ್ ವಿಧಿಸುವುದರ ಜತೆಗೆ, ರೂ 75,000 ಅಥವಾ ಅದಕ್ಕಿಂತ ಹೆಚ್ಚಿನ ವಹಿವಾಟುಗಳಿಗೆ ಗರಿಷ್ಠ ಶುಲ್ಕವನ್ನು ರೂ 300ಕ್ಕೆ ನಿಗದಿಪಡಿಸಲಾಗಿದೆ. ಹೊಸ ಶುಲ್ಕ ವ್ಯವಸ್ಥೆಯ ಕಾನೂನುಬದ್ಧತೆ ಹಾಗೂ ಅದನ್ನು ಜಾರಿಗೆ ತಂದಿರುವ ಪ್ರಕ್ರಿಯೆಯನ್ನು ಸುಪ್ರೀಂ ಕೋರ್ಟ್ ಪರಿಶೀಲಿಸಬೇಕು ಎಂದು ಅರ್ಜಿಯಲ್ಲಿ ಮನವಿ ಮಾಡಲಾಗಿದೆ.

## ಪ್ರದೋಷ್ ಮಾಫಿ ಸಾಕ್ಷಿಯಾಗಲು ಕೋರ್ಟ್ ಮತ್ತೆ ಒಪ್ಪಿಗೆ

● ವಿಕ್ರಮ ವಾಹಿನಿ । ಬೆಂಗಳೂರು

ರೇಣುಕಾಸ್ವಾಮಿ ಕೊಲೆ ಪ್ರಕರಣದ 14ನೇ ಆರೋಪಿ ಪ್ರದೋಷ್ ಅವರನ್ನು ಮಾಫಿ ಸಾಕ್ಷಿಯನ್ನಾಗಿ ಮಾಡಲು 59ನೇ ಸಿಸಿಹೆಚ್ ನ್ಯಾಯಾಲಯ ಬುಧವಾರ ಮತ್ತೆ ಅನುಮತಿ ನೀಡಿದೆ. ಪ್ರದೋಷ್ ಮಾಫಿ ಸಾಕ್ಷಿಯಾಗುವುದನ್ನು ತಡೆಯುವಂತೆ ನಟ ದರ್ಶನ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಾಲಯ ವಜಾಗೊಳಿಸಿದೆ.

ಈ ಹಿಂದೆ ಪ್ರದೋಷ್ ಅವರನ್ನು ಮಾಫಿ ಸಾಕ್ಷಿಯನ್ನಾಗಿ ಮಾಡಲು ನೀಡಿದ್ದ ಆದೇಶವನ್ನು ದರ್ಶನ್ ಪರ ವಕೀಲರು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. ವಿಚಾರಣೆ ನಡೆಸಿದ್ದ ಹೈಕೋರ್ಟ್, ಹಿಂದಿನ ಆದೇಶವನ್ನು ಮಾರ್ಪಡಿಸಿ, ವಿಚಾರಣಾ ನ್ಯಾಯಾಲಯವು ಮತ್ತೊಮ್ಮೆ ಹೊಸ ಆದೇಶ ಹೊರಡಿಸುವಂತೆ ಸೂಚಿಸಿತ್ತು. ಹೈಕೋರ್ಟ್ ಸೂಚನೆಯಂತೆ ಬುಧವಾರ ವಿಚಾರಣೆ ನಡೆಸಿದ ನ್ಯಾಯಾಲಯ, ಪ್ರದೋಷ್ ಅವರ ಒಪ್ಪಿಗೆಯನ್ನು ಪಡೆದ ಬಳಿಕ ಮಾಫಿ ಸಾಕ್ಷಿಯಾಗಿಸುವ ಅರ್ಜಿಯನ್ನು ಅಂಗೀಕರಿಸಿತು. ತನಿಖೆ ಪೂರ್ಣಗೊಳ್ಳುವವರೆಗೆ ಪ್ರಕ್ರಿಯೆ ಮುಂದೂಡಬೇಕು ಎಂಬ ದರ್ಶನ್ ಪರ ವಕೀಲರ ಮನವಿಯನ್ನೂ ತಿರಸ್ಕರಿಸಿತು.

# ಭಾರತ–ಪಾಕ್ ನೌಕಾಪಡೆ ಹಡಗುಗಳ ಡಿಕ್ಕಿ!

■ ಭಾರತೀಯ ಕ್ಯಾಪ್ಟನ್‌ನ ಸಮಯೋಚಿತ ಕ್ರಮದಿಂದ ಭಾರೀ ಅನಾಹುತ ತಪ್ಪಿದ ಭಾರೀ ಅನಾಹುತ? ■

● ವಿಕ್ರಮ ವಾಹಿನಿ । ನವದೆಹಲಿ

ಉತ್ತರ ಅರೇಬಿಯನ್ ಸಮುದ್ರದ ಅಂತರರಾಷ್ಟ್ರೀಯ ಜಲಪ್ರದೇಶದಲ್ಲಿ ಭಾರತೀಯ ನೌಕಾಪಡೆಯ ಯುದ್ಧನೌಕೆ ಹಾಗೂ ಪಾಕಿಸ್ತಾನ ನೌಕಾಪಡೆಯ ‘ಪಿಎನ್‌ಎಸ್ ಹುನೈನ್’ ನಡುವೆ ಡಿಕ್ಕಿ ಸಂಭವಿಸಿರುವುದು ಆತಂಕಕ್ಕೆ ಕಾರಣವಾಗಿದೆ. ಘಟನೆಯಲ್ಲಿ ಭಾರತೀಯ ಯುದ್ಧನೌಕೆಗೆ ದೊಡ್ಡ ಹಾನಿಯಾಗಿಲ್ಲ ಎಂದು ತಿಳಿದುಬಂದಿದ್ದು, ಪಾಕಿಸ್ತಾನದ ಹಡಗು ಹಾನಿಗೊಂಡು ಕರಾಚಿ ಬಂದರಿಗೆ ಮರಳಿದೆ ಎಂದು ವರದಿಯಾಗಿದೆ.

ಭಾರತೀಯ ನೌಕಾಪಡೆಯ ಹಡಗನ್ನು ಪಿಎನ್‌ಎಸ್ ಹುನೈನ್ ಕೆಲಕಾಲ ಹಿಂಬಾಲಿಸುತ್ತಿತ್ತು. ರೇಡಿಯೋ ಮೂಲಕ ಹಲವು ಬಾರಿ ಎಚ್ಚರಿಕೆ ನೀಡಿದರೂ ಪಾಕಿಸ್ತಾನಿ ಹಡಗು ಸಮೀಪಕ್ಕೆ ಬಂದಿದ್ದು, ಬಳಿಕ ಡಿಕ್ಕಿ ಸಂಭವಿಸಿದೆ ಎಂದು ಮೂಲಗಳು ತಿಳಿಸಿವೆ. ಭಾರತೀಯ ಕ್ಯಾಪ್ಟನ್ ಕೈಗೊಂಡ ಸಮಯೋಚಿತ ಕ್ರಮದಿಂದ ಹೆಚ್ಚಿನ ಜೀವಹಾನಿ ಅಥವಾ ಆಸ್ತಿ ನಷ್ಟ ತಪ್ಪಿತು ಎಂದು ವರದಿಯಾಗಿದೆ.

**ಪಾಕ್‌ಗೆ ಭಾರತದ ತೀವ್ರ ಆಕ್ಷೇಪ:** ಘಟನೆಯನ್ನು ಭಾರತ ಗಂಭೀರವಾಗಿ ಪರಿಗಣಿಸಿದ್ದು, ನವದೆಹಲಿಯಲ್ಲಿರುವ ಪಾಕಿಸ್ತಾನ ಹೈಕಮಿಷನ್‌ನ ಚಾರ್ಜ್ ಡಿ'ಅಫೇರ್ಸ್



ಅವರನ್ನು ವಿದೇಶಾಂಗ ಸಚಿವಾಲಯಕ್ಕೆ ಕರೆಸಿ ಆಕ್ಷೇಪ ದಾಖಲಿಸಲಾಗಿದೆ. ಪಾಕಿಸ್ತಾನಿ ಹಡಗು 1991ರ ಭಾರತ–ಪಾಕಿಸ್ತಾನ ಸಮುದ್ರ ಗಡಿಗೆ ಸಂಬಂಧಿಸಿದ ಒಪ್ಪಂದದ 10ನೇ ವಿಧಿಯನ್ನು ಉಲ್ಲಂಘಿಸಿದೆ ಎಂದು ಭಾರತ ಆಕ್ಷೇಪಿಸಿದೆ.

ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಅವರು ಘಟನೆಯ ಕುರಿತು ರಕ್ಷಣಾ ವ್ಯವಸ್ಥೆಯ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ ಎಂದು ತಿಳಿದುಬಂದಿದೆ.

**ಉತ್ತರ ಅರೇಬಿಯನ್ ಸಮುದ್ರದ ಅಂತರ ರಾಷ್ಟ್ರೀಯ ಜಲಪ್ರದೇಶದಲ್ಲಿ ಭಾರತೀಯ ಯುದ್ಧನೌಕೆ ಹಾಗೂ ಪಾಕಿಸ್ತಾನ ನೌಕಾಪಡೆಯ ‘ಪಿಎನ್‌ಎಸ್ ಹುನೈನ್’ ನಡುವೆ ಡಿಕ್ಕಿ ಸಂಭ ವಿಸಿದ್ದು, ಭಾರತೀಯ ಕ್ಯಾಪ್ಟನ್‌ನ ಸಮ ಯೋಚಿತ ಕ್ರಮದಿಂದ ಭಾರೀ ಅನಾಹುತ ತಪ್ಪಿದೆ. ಘಟನೆಗೆ ಸಂಬಂಧಿಸಿ ಭಾರತ ಪಾಕಿಸ್ತಾನಕ್ಕೆ ರಾಜತಾಂತ್ರಿಕ ಪ್ರತಿಭಟನೆ ದಾಖಲಿಸಿದ್ದು, 1991ರ ಒಪ್ಪಂದ ಉಲ್ಲಂಘನೆಯಾಗಿದೆ ಎಂದು ತಿಳಿಸಿದೆ.**

**‘ಹುನೈನ್’ ಸಾಮರ್ಥ್ಯ:** ಪಿಎನ್‌ಎಸ್ ಹುನೈನ್ (ಎಫ್–273) ಪಾಕಿಸ್ತಾನ ನೌಕಾಪಡೆಯ ಯಾರ್ಮೌಕ್ ವರ್ಗದ ಎರಡನೇ ಬ್ಯಾಚ್‌ನ ಕಡಲ ಗಸ್ತು ಹಡಗಾಗಿದೆ. ರೊಮೇನಿಯಾದ ಡ್ಯಾಮೆನ್ ಶಿಪ್‌ಯಾರ್ಡ್‌ನಲ್ಲಿ ನಿರ್ಮಾಣಗೊಂಡ ಈ ಹಡಗು 2024ರ ಜುಲೈನಲ್ಲಿ ಪಾಕಿಸ್ತಾನ ನೌಕಾಪಡೆಗೆ ಸೇರ್ಪಡೆಯಾಗಿದೆ.

ಹಡಗಿನಲ್ಲಿ 30 ಮಿ.ಮೀ. ಹಾಗೂ 12.7 ಮಿ.ಮೀ. ರಿಮೋಟ್ ವೆಪನ್ ವ್ಯವಸ್ಥೆಗಳು ಸೇರಿದಂತೆ ವಿವಿಧ ಶಸ್ತ್ರಾಸ್ತ್ರ ಹಾಗೂ ನಿಗಾ ವ್ಯವಸ್ಥೆಗಳಿವೆ ಎಂದು ವರದಿಯಾಗಿದೆ. ಹಡಗು ಮುಖ್ಯವಾಗಿ ಕಡಲ ಭದ್ರತೆ, ಗಸ್ತು ಹಾಗೂ ಮೇಲ್ವಿ ಕಾರ್ಯಾಚರಣೆಗಳಿಗೆ ಬಳಸುವಂತೆ ವಿನ್ಯಾಸಗೊಳಿಸಲಾಗಿದೆ.

**ಉದ್ವಿಗ್ನತೆ ಹೆಚ್ಚಿಸುವ ಸಾಧ್ಯತೆ:** ಅಂತರರಾಷ್ಟ್ರೀಯ ಜಲಪ್ರದೇಶದಲ್ಲಿ ನಡೆದಿರುವ ಈ ಘಟನೆ ಭಾರತ–ಪಾಕಿಸ್ತಾನ ನೌಕಾಪಡೆಗಳ ನಡುವಿನ ಕಾರ್ಯಾಚರಣೆಯಲ್ಲಿ ಎಚ್ಚರಿಕೆಯ ಅಗತ್ಯವನ್ನು ಮತ್ತೊಮ್ಮೆ ಒತ್ತಿಹೇಳಿದೆ. ಇಂತಹ ಘಟನೆಗಳು ಉಭಯ ದೇಶಗಳ ನಡುವಿನ ಉದ್ವಿಗ್ನತೆಯನ್ನು ಹೆಚ್ಚಿಸುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ, ಸಮುದ್ರದಲ್ಲಿ ನಿಗದಿತ ಒಪ್ಪಂದಗಳು ಮತ್ತು ಸುರಕ್ಷತಾ ನಿಯಮಗಳನ್ನು ಪಾಲಿಸುವುದು ಮಹತ್ವದ್ದಾಗಿದೆ. ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಉಭಯ ರಾಷ್ಟ್ರಗಳ ನೌಕಾಪಡೆಗಳು ಹೆಚ್ಚಿನ ಎಚ್ಚರಿಕೆ ವಹಿಸುವ ಅಗತ್ಯವಿದೆ.

# ಅನಂತ್ ನಾಗ್‌ಗೆ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ

● ವಿಕ್ರಮ ವಾಹಿನಿ । ನವದೆಹಲಿ

ಕನ್ನಡದ ಹಿರಿಯ ನಟ ಅನಂತ್ ನಾಗ್ ಅವರಿಗೆ ಭಾರತೀಯ ಚಿತ್ರರಂಗದ ಅತ್ಯುನ್ನತ ಗೌರವಗಳಲ್ಲಿ ಒಂದಾದ ‘ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ–2024’ ಘೋಷಿಸಲಾಗಿದೆ. ಭಾರತೀಯ ಚಿತ್ರರಂಗಕ್ಕೆ, ವಿಶೇಷವಾಗಿ ಕನ್ನಡ ಚಿತ್ರರಂಗಕ್ಕೆ ನೀಡಿರುವ ಸುದೀರ್ಘ ಕೊಡುಗೆಯನ್ನು ಪರಿಗಣಿಸಿ ಪ್ರಶಸ್ತಿ ಆಯ್ಕೆ ಸಮಿತಿಯ ಶಿಫಾರಸಿನ ಮೇರೆಗೆ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಗುಜರಾತ್‌ನ ಕೆವಾಡಿಯಾದಲ್ಲಿ ಸೆ.22ರಂದು ನಡೆಯಲಿರುವ 72ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅನಂತ್ ನಾಗ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

**ಪ್ರಧಾನಿ ಮೋದಿ ಅಭಿನಂದನೆ**

ಪ್ರಧಾನಿ ನರೇಂದ್ರ ಮೋದಿ ಅವರು ಅನಂತ್ ನಾಗ್ ಅವರನ್ನು ಅಭಿನಂದಿಸಿದ್ದು, ದಶಕಗಳ ಕಾಲದ ಅವರ ಸಹಜ ಅಭಿನಯ, ಬಹುಮುಖ ಪ್ರತಿಭೆ ಹಾಗೂ ವಿವಿಧ ಪಾತ್ರಗಳಿಗೆ ನೀಡಿದ ನೈಜತೆಯಿಂದ ಭಾರತೀಯ, ಅದರಲ್ಲೂ ಕನ್ನಡ ಚಿತ್ರರಂಗದ ಮೇಲೆ ಅಳಿಸಲಾಗದ ಛಾಪು ಮೂಡಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.


ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೂಡ ಅನಂತ್ ನಾಗ್ ಅವರಿಗೆ ಅಭಿನಂದನೆ ಸಲ್ಲಿಸಿದ್ದು, ಈ ಗೌರವ ಕನ್ನಡಿಗರಿಗೆ ಹೆಮ್ಮೆಯ ಹಾಗೂ ಸಂತಸದ ಕ್ಷಣ ಎಂದು ಹೇಳಿದ್ದಾರೆ.

**300ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯ**

1948ರ ಸೆ.4ರಂದು ಜನಿಸಿದ ಅನಂತ್ ನಾಗ್ (ಅನಂತ್ ನಾಗರಕಟ್ಟೆ) ಅವರು 250ಕ್ಕೂ ಹೆಚ್ಚು ಕನ್ನಡ ಚಿತ್ರಗಳು ಸೇರಿದಂತೆ 300ಕ್ಕೂ ಅಧಿಕ ಸಿನಿಮಾಗಳಲ್ಲಿ ಅಭಿನಯಿಸಿದ್ದಾರೆ. ಹಿಂದಿ, ತೆಲುಗು, ತಮಿಳು, ಮರಾಠಿ, ಮಲಯಾಳಂ ಹಾಗೂ ಇಂಗ್ಲಿಷ್ ಚಿತ್ರಗಳಲ್ಲೂ ಅವರು ನಟಿಸಿದ್ದಾರೆ. ಚಲನಚಿತ್ರದ ಜತೆಗೆ ರಂಗಭೂಮಿ ಹಾಗೂ ಕಿರುತೆರೆಯಲ್ಲೂ ಗುರುತಿಸಿಕೊಂಡಿರುವ ಅವರು ‘ಮಾಲ್ಗುಡಿ ಡೇಸ್’ ಧಾರಾವಾಹಿಯಲ್ಲೂ ಅಭಿನಯಿಸಿದ್ದಾರೆ.

**ಪದ್ಮಭೂಷಣ ಸೇರಿ ಹಲವು ಗೌರವ**

ಅನಂತ್ ನಾಗ್ ಅವರು ಐದು ಬಾರಿ ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿಗೆ ಭಾಜನರಾಗಿದ್ದಾರೆ. 2025ರಲ್ಲಿ ಕೇಂದ್ರ ಸರ್ಕಾರ ಅವರಿಗೆ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಿತ್ತು.



**30 ವರ್ಷಗಳ ಬಳಿಕ ಕನ್ನಡಕ್ಕೆ ಗೌರವ**

1969ರಲ್ಲಿ ಆರಂಭವಾದ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನು ಭಾರತೀಯ ಚಿತ್ರರಂಗದ ಬೆಳವಣಿಗೆಗೆ ಅತ್ಯುತ್ತಮ ಕೊಡುಗೆ ನೀಡಿದ ಸಾಧಕರಿಗೆ ನೀಡಲಾಗುತ್ತದೆ. ಡಾ. ರಾಜ್‌ಕುಮಾರ್ ಬಳಿಕ ಸುಮಾರು ಮೂರು ದಶಕಗಳ ನಂತರ ಕನ್ನಡದ ಮತ್ತೊಬ್ಬ ನಟನಿಗೆ ಈ ಪ್ರತಿಷ್ಠಿತ ಗೌರವ ದೊರೆತಿದೆ. ಪ್ರಶಸ್ತಿಯು ಸ್ವರ್ಣ ಕಮಲ ಪದಕ, ಶಾಲು ಹಾಗೂ 10 ಲಕ್ಷ ನಗದು ಬಹುಮಾನ ಒಳಗೊಂಡಿದೆ.

## ‘ಮಗನನ್ನು ಬೆಳೆಸಲು ಪ್ರಜ್ವಲ್‌ರನ್ನು ರಾಜಕೀಯವಾಗಿ ಮುಗಿಸಿದರು’

● ವಿಕ್ರಮ ವಾಹಿನಿ । ರಾಮನಗರ

ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ತಮ್ಮ ಮಗನನ್ನು ರಾಜಕೀಯವಾಗಿ ಬೆಳೆಸುವ ಉದ್ದೇಶದಿಂದ ಸಹೋದರನ ಪುತ್ರ ಪ್ರಜ್ವಲ್ ರೇವಣ್ಣ ಅವರನ್ನು ರಾಜಕೀಯವಾಗಿ ಮುಗಿಸಿದರು ಎಂದು ಸಚಿವ ಎಚ್.ಸಿ. ಬಾಲಕೃಷ್ಣ ಆರೋಪಿಸಿದ್ದಾರೆ.

ರಾಮನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಸಚಿವರಾಗಿರುವ ಕುಮಾರಸ್ವಾಮಿ ಅವರು ತಮ್ಮ ಸ್ಥಾನಮಾನದ ಘನತೆ ಮರೆತು ಪಂಚಾಯಿತಿ ಸದಸ್ಯರಂತೆ ಮಾತನಾಡುತ್ತಿದ್ದಾರೆ ಎಂದು ಟೀಕಿಸಿದರು.

ನೈಸ್ ಮತ್ತು ಕೆಪಿಎಸ್‌ಸಿ ಅಕ್ರಮಗಳನ್ನು ಮುಚ್ಚಿಹಾಕಲು ಪ್ರಜ್ವಲ್ ರೇವಣ್ಣ ಪ್ರಕರಣವನ್ನು ಮುನ್ನೆಲೆಗೆ ತರಲಾಗುತ್ತಿದೆ ಎಂಬ ಕುಮಾರಸ್ವಾಮಿ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಬಾಲಕೃಷ್ಣ, “ಪ್ರಜ್ವಲ್ ಪ್ರಕರಣಕ್ಕೂ ನೈಸ್ ಹಾಗೂ ಕೆಪಿಎಸ್‌ಸಿ ವಿಚಾರಕ್ಕೂ ಏನು ಸಂಬಂಧ?” ಎಂದು ಪ್ರಶ್ನಿಸಿದರು.



ಪ್ರಜ್ವಲ್ ರೇವಣ್ಣ ಪ್ರಕರಣದ ಕುರಿತು ಪದೇಪದೆ ಮಾತನಾಡುವ ಮೂಲಕ ಅವರನ್ನು ಜೈಲಿಗೆ ಕಳುಹಿಸುವ ಪರಿಸ್ಥಿತಿ ನಿರ್ಮಾಣ ಮಾಡಲಾಗಿದೆ ಎಂದು ಆರೋಪಿಸಿದ ಅವರು, ಪ್ರಜ್ವಲ್ ಜೈಲಿನಲ್ಲೇ ಇರಬೇಕು ಹಾಗೂ ಅವರನ್ನು ರಾಜಕೀಯವಾಗಿ ಮುಗಿಸಿ ತಮ್ಮ ಮಗನನ್ನು ಬೆಳೆಸಬೇಕು ಎನ್ನುವುದು ಕುಮಾರಸ್ವಾಮಿ ಅವರ ಉದ್ದೇಶವಾಗಿದೆ ಎಂದು ದೂರಿದರು.

ಜೈಲಿನಲ್ಲಿದ್ದ ಪ್ರಜ್ವಲ್ ರೇವಣ್ಣ ಅವರ ಬಳಿ ಮೊಬೈಲ್ ಹೇಗೆ ಬಂತು ಎಂಬ ಬಗ್ಗೆ ಅನುಮಾನವಿದ್ದರೆ, ಈ ಕುರಿತು ಸಿಬಿಐ ತನಿಖೆಗೆ ಪತ್ರ ಬರೆಯಲಿ ಎಂದು ಬಾಲಕೃಷ್ಣ ಕುಮಾರಸ್ವಾಮಿ ಅವರಿಗೆ ಸವಾಲು ಹಾಕಿದರು.

ರಾಜ್ಯ ಸರ್ಕಾರದ 100 ದಿನಗಳ ಸಾಧನಾ ಕಾರ್ಯಕ್ರಮವನ್ನು ಕುಮಾರಸ್ವಾಮಿ ವ್ಯಂಗ್ಯವಾಡಿರುವುದಕ್ಕೂ ಬಾಲಕೃಷ್ಣ ತಿರುಗೇಟು ನೀಡಿದರು.

“ಪ್ರಪಂಚದಲ್ಲಿ ಕುಮಾರಸ್ವಾಮಿ ಒಬ್ಬರೇ ಮೇಧಾವಿ, ಉಳಿದವರೆಲ್ಲ ದಡ್ಡರು ಎಂಬ ಮನಸ್ಥಿತಿ ಅವರದ್ದು” ಎಂದು ಟೀಕಿಸಿದ ಅವರು, ‘ನಾನು ಹುಟ್ಟಿದ್ದೇ ಬಡವರಿಗಾಗಿ’ ಎಂಬ ಅವರ ಹೇಳಿಕೆಗಳ ಬಗ್ಗೆ ನಾವೇನು ಮಾತನಾಡಲು ಸಾಧ್ಯ ಎಂದು ವ್ಯಂಗ್ಯವಾಡಿದರು.

## ಗಣೇಶ ಪೂಜೆಗೆ ನೀರು ತರಲು ಹೋಗಿ ಬಾವಿಗೆ ಬಿದ್ದ ಕೃಷಿ ವಿಜ್ಞಾನಿ ಸಾವು

● ವಿಕ್ರಮ ವಾಹಿನಿ । ಉತ್ತರ ಕನ್ನಡ

ಗಣೇಶ ಹಬ್ಬದ ಪೂಜೆಗೆ ನೀರು ತರಲು ತೆರಳಿದ್ದ ಕೃಷಿ ವಿಜ್ಞಾನಿ ಹಾಗೂ ಕೃಷಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ. ಮಂಜುನಾಥ ನಾಯ್ಕ (65) ಅವರು ಆಕಸ್ಮಿಕವಾಗಿ ಬಾವಿಗೆ ಬಿದ್ದು ಮೃತಪಟ್ಟಿರುವ ದಾರುಣ ಘಟನೆ ಬುಧವಾರ ನಡೆದಿದೆ.

ಕುಮಟಾ ತಾಲೂಕಿನ ಕೋನಳ್ಳಿ ಗ್ರಾಮದವರಾದ ಡಾ. ಮಂಜುನಾಥ ನಾಯ್ಕ ಅವರು ಕೃಷಿ ವಿಜ್ಞಾನಿಯಾಗಿ, ನೂರಾರು ವಿದ್ಯಾರ್ಥಿಗಳು ಹಾಗೂ ಸಂಶೋಧನಾರ್ಥಿಗಳಿಗೆ ಮಾರ್ಗದರ್ಶಕರಾಗಿ ಮತ್ತು ಕೃಷಿಕರಿಗೆ ಸಲಹೆಗಾರರಾಗಿ ಸೇವೆ ಸಲ್ಲಿಸಿದ್ದರು. ಗಣೇಶ ಹಬ್ಬದ ಹಿನ್ನೆಲೆಯಲ್ಲಿ ಸ್ವಗ್ರಾಮಕ್ಕೆ ತೆರಳಿದ್ದ ಅವರು, ಪೂಜೆಗೆ ನೀರು ತರಲು ಹೋದ ಸಂದರ್ಭದಲ್ಲಿ ಬಾವಿಗೆ ಬಿದ್ದಿದ್ದಾರೆ ಎನ್ನಲಾಗಿದೆ. ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿಯಾಗಿ ಸೇವೆ ಸಲ್ಲಿಸಿದ್ದ ಅವರು, ಕೃಷಿ ಕ್ಷೇತ್ರದಲ್ಲಿ ಗಮನಾರ್ಹ ಸೇವೆ ಸಲ್ಲಿಸಿದ್ದರು. ಅವರ ಅಂತ್ಯಕ್ರಿಯೆ ಸ್ವಗ್ರಾಮದಲ್ಲೇ ನೆರವೇರಿತು.

## ಪಾಕ್ ಸೌಂದರ್ಯವರ್ಧಕ ಕ್ರೀಮ್‌ಗಳ ವಿರುದ್ಧ ಎಚ್ಚರಿಕೆ

● ವಿಕ್ರಮ ವಾಹಿನಿ । ನವದೆಹಲಿ

ನಿಗದಿತ ಮಿತಿಗಿಂತ ಹೆಚ್ಚಿನ ಭಾರ ಲೋಹಗಳನ್ನು ಹೊಂದಿರುವ ಹಾಗೂ ಭಾರತದಲ್ಲಿ ಮಾರಾಟಕ್ಕೆ ಅಗತ್ಯ ಅನುಮತಿ ಪಡೆಯದ ಎರಡು ‘ಮೇಡ್ ಇನ್ ಪಾಕಿಸ್ತಾನ್’ ಸೌಂದರ್ಯವರ್ಧಕ ಕ್ರೀಮ್‌ಗಳ ವಿರುದ್ಧ ಕೇಂದ್ರ ಔಷಧ ನಿಯಂತ್ರಣ ಸಂಸ್ಥೆ (CDSCO) ಸಾರ್ವಜನಿಕ ಆರೋಗ್ಯ ಎಚ್ಚರಿಕೆ ನೀಡಿದೆ.

‘ಗೋರಿ ಬ್ಯೂಟಿ ಕ್ರೀಮ್’ ಮತ್ತು ‘ಚಾಂದನಿ ವೈಟ್ನಿಂಗ್ ಕ್ರೀಮ್’ ಉತ್ಪನ್ನಗಳು ಪರೀಕ್ಷೆ ಹಾಗೂ ವಿಶ್ಲೇಷಣೆಯಲ್ಲಿ ಅನಧಿಕೃತವಾಗಿರುವುದು ದೃಢಪಟ್ಟಿದೆ. ಇವುಗಳಲ್ಲಿ ಹೆಚ್ಚಿನ ಪ್ರಮಾಣದ ಭಾರ ಲೋಹಗಳಿರುವುದರಿಂದ ಆರೋಗ್ಯಕ್ಕೆ ವಿಷಕಾರಿ ಪರಿಣಾಮ ಉಂಟಾಗುವ ಸಾಧ್ಯತೆಯಿದೆ ಎಂದು ಡ್ರಗ್ಸ್ ಕಂಟ್ರೋಲರ್ ಜನರಲ್ ಆಫ್ ಇಂಡಿಯಾ (DCGI) ಎಚ್ಚರಿಸಿದ್ದಾರೆ.

ಅಧಿಕೃತ ಪರವಾನಗಿ, ತಯಾರಕರ ವಿವರ, ಬ್ಯಾಚ್ ಸಂಖ್ಯೆ, ಉತ್ಪಾದನೆ–ಮುಕ್ತಾಯ ದಿನಾಂಕ ಹಾಗೂ ನೋಂದಣಿ ಸಂಖ್ಯೆಯಿರುವ ಸೌಂದರ್ಯವರ್ಧಕ ಉತ್ಪನ್ನಗಳನ್ನು ಮಾತ್ರ ಖರೀದಿಸುವಂತೆ ಸಾರ್ವಜನಿಕರಿಗೆ ಸಲಹೆ ನೀಡಲಾಗಿದೆ. ಅನಧಿಕೃತ ಉತ್ಪನ್ನಗಳ ಮಾರಾಟ, ವಿತರಣೆ ಅಥವಾ ಜಾಹೀರಾತು ಕಂಡುಬಂದರೆ ಸಂಬಂಧಪಟ್ಟ ಔಷಧ ನಿಯಂತ್ರಣ ಅಧಿಕಾರಿಗಳಿಗೆ ಮಾಹಿತಿ ನೀಡುವಂತೆ ಸೂಚಿಸಲಾಗಿದೆ.



# ‘ಹರೇ ಶ್ರೀನಿವಾಸ’ ಘೋಷವನ್ನು ಮೊಳಗಿಸಿದ ದಾಸಸಾಹಿತ್ಯದ ಸಾರಥಿ ಶ್ರೀ ಅಪ್ಪಣ್ಣಾಚಾರ್ಯರು ಇನ್ನಿಲ್ಲ

**ದಾಸಸಾಹಿತ್ಯದ ಸಂರಕ್ಷಣೆ, ಸಂಶೋಧನೆ ಹಾಗೂ ಪ್ರಸಾರಕ್ಕೆ ಅಪಾರ ಕೊಡುಗೆ ನೀಡಿದ ಕೌತಾಳಂ ಅಪ್ಪಣ್ಣಾಚಾರ್ಯರು, ‘ಹರೇ ಶ್ರೀನಿವಾಸ’ ಘೋಷವನ್ನು ದಕ್ಷಿಣಭಾರತದಾದ್ಯಂತ ಮೊಳಗಿಸಿದ ಸಾರಥಿಯಾಗಿದ್ದರು. ಭಜನಾಮಂಡಳಿಗಳ ಸ್ಥಾಪನೆಯಿಂದ ಅಪರೂಪದ ದಾಸಕೃತಿಗಳ ಸಂಪಾದನೆವರೆಗೆ ಅವರ ಸೇವೆ ಅನನ್ಯವಾಗಿತ್ತು.**

ತಿರುಮಲ ತಿರುಪತಿ ದೇವಸ್ಥಾನಗಳ ಕಾರ್ಯನಿರ್ವಹಣಾಧಿಕಾರಿಗಳಾಗಿ ಶ್ರೀ ಪಿ.ವಿ.ಆರ್.ಕೆ. ಪ್ರಸಾದ್ ಅವರು ಕಾರ್ಯನಿರ್ವಹಿಸುತ್ತಿದ್ದ ಸಂದರ್ಭದಲ್ಲಿ, ಅವರ ವಿಶೇಷ ಆಸಕ್ತಿ ಮತ್ತು ದೂರದೃಷ್ಟಿಯ ಫಲವಾಗಿ ಟಿ.ಟಿ.ಡಿ. ದೇವಸ್ಥಾನಗಳ ಆಶ್ರಯದಲ್ಲಿ ‘ದಾಸಸಾಹಿತ್ಯ ಪ್ರಾಜೆಕ್ಟ್’ ಎಂಬ ಮಹತ್ವದ ಯೋಜನೆ ಆರಂಭವಾಯಿತು. ಹರಿದಾಸಸಾಹಿತ್ಯದ ಸಂರಕ್ಷಣೆ, ಸಂಶೋಧನೆ, ಪ್ರಕಟಣೆ ಹಾಗೂ ಪ್ರಸಾರದ ದೃಷ್ಟಿಯಿಂದ ಇದು ಒಂದು ಐತಿಹಾಸಿಕ ಹೆಜ್ಜೆಯಾಗಿತ್ತು.

ಈ ಮಹತ್ವದ ಯೋಜನೆಯ ಮೊದಲ ವಿಶೇಷಾಧಿಕಾರಿಯಾಗಿ ನೇಮಕಗೊಂಡವರು ಕೌತಾಳದ ಶ್ರೀಗುರು ಜಗನ್ನಾಥದಾಸರ ವಂಶಸ್ಥರು, ಬಹುಭಾಷಾ ವಿದ್ವಾಂಸರು ಹಾಗೂ ದಾಸಸಾಹಿತ್ಯದ ಆಳವಾದ ಅಧ್ಯಯನಶೀಲರಾದ ಶ್ರೀ ಕೌತಾಳಂ ಅಪ್ಪಣ್ಣಾಚಾರ್ಯರು. ಹರಿದಾಸಸಾಹಿತ್ಯ ಪರಂಪರೆಯ ಇತಿಹಾಸದಲ್ಲಿ ಈ ನೇಮಕ ಒಂದು ಮಹತ್ತರ ಘಟ್ಟವೆಂದೇ ಹೇಳಬಹುದು.

ಕನ್ನಡ ಮತ್ತು ತೆಲುಗು ಭಾಷೆಗಳೆರಡರಲ್ಲೂ ಅಪಾರ ಪಾಂಡಿತ್ಯ ಹೊಂದಿದ್ದ ಅಪ್ಪಣ್ಣಾಚಾರ್ಯರು ಕೇವಲ ಗ್ರಂಥಾಧ್ಯಯನದಲ್ಲಿ ನಿಲ್ಲದೆ, ದಾಸಸಾಹಿತ್ಯವನ್ನು ಜನಮಾನಸಕ್ಕೆ ತಲುಪಿಸುವ ಮಹತ್ಕಾರ್ಯದಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡರು. ಅವರ ಕ್ರಿಯಾಶೀಲತೆ ಕರ್ನಾಟಕದ ಗಡಿಗಳನ್ನು ದಾಟಿ ಆಂಧ್ರಪ್ರದೇಶ, ಇಂದಿನ ತೆಲಂಗಾಣ, ತಮಿಳುನಾಡು ಹಾಗೂ ಮಹಾರಾಷ್ಟ್ರಗಳವರೆಗೂ ವಿಸ್ತರಿಸಿತು.

ಸಹಸ್ರಾರು ಭಜನಾಮಂಡಳಿಗಳ ಸ್ಥಾಪನೆಗೆ ಅವರು ಪ್ರೇರಕಶಕ್ತಿಯಾದರು. ಕನ್ನಡ ಮಾತೃಭಾಷೆಯವರಷ್ಟೇ ಅಲ್ಲದೆ ಕನ್ನಡ ಅರಿಯದ ಭಕ್ತರೂ ತಮ್ಮ ತಮ್ಮ ಭಾಷೆಗಳ ಲಿಪಿಗಳಲ್ಲಿ ಹರಿದಾಸರ ಪದಗಳನ್ನು ಬರೆದುಕೊಂಡು ಹಾಡುವಂತಹ ವಾತಾವರಣ ನಿರ್ಮಾಣವಾಯಿತು. ಹೀಗೆ ದಾಸರಾಯರ ದೇವರನಾಮಗಳು ಭಾಷೆಯ ಗಡಿಗಳನ್ನು ಮೀರಿ ಭಕ್ತಿಯ ಭಾಷೆಯಾದವು.



ದಕ್ಷಿಣಭಾರತದ ಅನೇಕ ಪ್ರದೇಶಗಳಲ್ಲಿ ‘ಹರೇ ಶ್ರೀನಿವಾಸ’ ಎಂಬ ಘೋಷ ಅನುರಣಿಸಲು ಆರಂಭಿಸಿತು. ಮೆಟ್ಟಿಲೋತ್ಸವಗಳಂತಹ ವಿಶಿಷ್ಟ ಕಾರ್ಯಕ್ರಮಗಳ ಮೂಲಕ ದಾಸಸಾಹಿತ್ಯದ ವೈಭವ ಇನ್ನಷ್ಟು ಜನಮನಕ್ಕೆ ಹತ್ತಿರವಾಯಿತು. ಹರಿದಾಸಸಾಹಿತ್ಯದ ಪ್ರಚಾರವು ಒಂದು ವ್ಯವಸ್ಥಿತ ಚಳವಳಿಯ ಸ್ವರೂಪವನ್ನು ಪಡೆದುಕೊಳ್ಳಲು ಅಪ್ಪಣ್ಣಾಚಾರ್ಯರ ಸೇವೆ ಮಹತ್ತರ ಕಾರಣವಾಯಿತು.

ಅವರು ಕೇವಲ ಸಂಘಟಕರಲ್ಲ; ಸ್ವತಃ ಸೃಜನಶೀಲ ಲೇಖಕರೂ, ಸಂಶೋಧಕರೂ, ಸಂಪಾದಕರೂ ಆಗಿದ್ದರು. ಅನೇಕ ಕೃತಿಗಳನ್ನು ರಚಿಸಿ, ಅನೇಕ ಅಪೂರ್ವ ಗ್ರಂಥಗಳನ್ನು ಸಂಪಾದಿಸಿ ದಾಸಸಾಹಿತ್ಯದ ಸಾರಸ್ವತ ಲೋಕಕ್ಕೆ ಅಮೂಲ್ಯ ಕೊಡುಗೆ ನೀಡಿದ್ದಾರೆ.

ಅವರ ‘ಭಕ್ತ ಪುರಂದರದಾಸರು’ ನಾಟಕವು ಪುರಂದರದಾಸರ ಭಕ್ತಿಜೀವನ ಮತ್ತು ವ್ಯಕ್ತಿತ್ವವನ್ನು ನಾಟಕೀಯವಾಗಿ ಪರಿಚಯಿಸುವ ಕೃತಿ. ಹಾಗೆಯೇ ಶ್ರೀರಾಘವೇಂದ್ರ ಗುರುಸಾರ್ವಭೌಮರ ಬೃಂದಾವನದ ವೈಶಿಷ್ಟ್ಯ ಹಾಗೂ ಅದರ ಅಂತರ್ನಿಹಿತ ತಾತ್ತ್ವಿಕತೆಯನ್ನು ವಿಶ್ಲೇಷಿಸುವ ‘ಬೃಂದಾವನ ತತ್ತ್ವ’ ಕೃತಿಯೂ ಅವರ ವಿದ್ವತ್ತಿನ ಮತ್ತೊಂದು ಸಾಕ್ಷಿಯಾಗಿದೆ.

**ಸಂಪಾದಕತ್ವದ ಮೂಲಕ ಸಾರಸ್ವತ ಸೇವೆ**

ಅಪ್ಪಣ್ಣಾಚಾರ್ಯರು ಸಂಪಾದಿಸಿರುವ ಕೃತಿಗಳ ಪೈಕಿ ‘ದಾಸತತ್ತ್ವಪ್ರಕಾಶಿಕೆ’, ‘ಬಿಡೆನೋ ನಿನ್ನಂಘ್ರಿ ಶ್ರೀನಿವಾಸ’, ‘ಶ್ರೀಕನಕದಾಸರು: ಅವರ ಸಾಹಿತ್ಯ ಸಮೀಕ್ಷೆ’, ‘ಶ್ರೀಗುರುಜಗನ್ನಾಥದಾಸರ ಕೃತಿರತ್ನಮಾಲ’, ‘ಶ್ರೀ ಶ್ರೀ ವಿಠಲದಾಸರ ಕೃತಿಗಳು’ ಮೊದಲಾದವು ಪ್ರಮುಖವಾಗಿವೆ.

ವಿಶೇಷವಾಗಿ *‘ದಾಸತತ್ತ್ವಪ್ರಕಾಶಿಕೆ’*ಯಲ್ಲಿ ಪ್ರಮುಖ ಹರಿದಾಸರು, ಪ್ರಮುಖ ಯತಿಗಳು ಹಾಗೂ ತಾರತಮ್ಯ ಕ್ರಮದಲ್ಲಿ ದೇವತಾಸ್ಮರಣೆಯ ಮಹತ್ವ ಮೊದಲಾದ ವಿಷಯಗಳನ್ನು ಒಳಗೊಂಡಿರುವುದು ದಾಸತತ್ತ್ವದ ಅಧ್ಯಯನಕ್ಕೆ ಉಪಯುಕ್ತವಾದ ಸಂಪನ್ಮೂಲವಾಗಿದೆ.

ಅಪ್ಪಣ್ಣಾಚಾರ್ಯರ ಸಂಪಾದಕತ್ವ ಮತ್ತು ವಿಶೇಷ ಆಸಕ್ತಿಯಿಂದ ‘ದಾಸಸಾಹಿತ್ಯ ಪ್ರಾಜೆಕ್ಟ್’ ಅವಧಿಯಲ್ಲಿ ಅನೇಕ ಮಹತ್ವದ ಸಂಶೋಧನಾತ್ಮಕ ಕೃತಿಗಳು ಬೆಳಕು ಕಂಡವು.

ಪದ್ಮಶ್ರೀ ಡಾ. ಬನ್ನಂಜೆ ಗೋವಿಂದಾಚಾರ್ಯರು ಶ್ರೀ ಪುರಂದರದಾಸಾರ್ಯರ ಏಳು ಕೀರ್ತನೆಗಳನ್ನು ಆಯ್ದುಕೊಂಡು, ದಾಸರಾಯರ ಪ್ರತಿಯೊಂದು ನುಡಿಯನ್ನೂ ಉಪನಿಷತ್ತಿನ ತಾತ್ತ್ವಿಕ ಆಳದಲ್ಲಿ ಪರಿಚಯಿಸುವ ‘ಪುರಂದರೋಪನಿಷತ್’ ಕೃತಿಯೂ ಈ ಅವಧಿಯಲ್ಲಿ ಪ್ರಕಟವಾದ ಮಹತ್ವದ ಗ್ರಂಥಗಳಲ್ಲಿ ಒಂದು.

ಅದೇ ರೀತಿ ವೇದ–ಪುರಾಣಗಳಲ್ಲಿ ಪ್ರಧಾನವಾಗಿ ನಿರೂಪಿತವಾಗಿರುವ ಸೃಷ್ಟಿರಹಸ್ಯಗಳನ್ನು ಹರಿದಾಸರು ತಮ್ಮ ಕೃತಿಗಳಲ್ಲಿ ಯಾವ ರೀತಿಯಲ್ಲಿ ಕ್ರೋಢೀಕರಿಸಿ, ಭಕ್ತಿಯ ಭಾಷೆಯಲ್ಲಿ ಹಾಡಿದ್ದಾರೆ ಎಂಬುದನ್ನು ವಿಶ್ಲೇಷಿಸುವ ವಿದ್ವಾನ್ ಬಾದರಾಯಣಮೂರ್ತಿಯವರ ‘ದಾಸಸಾಹಿತ್ಯದಲ್ಲಿ ಸೃಷ್ಟಿಪ್ರಕರಣ’ ಕೃತಿಯೂ ದಾಸಸಾಹಿತ್ಯದ ಅಧ್ಯಯನಕ್ಕೆ ವಿಶಿಷ್ಟ ಕೊಡುಗೆಯಾಗಿದೆ.

2ನೇ ಪುಟಕ್ಕೆ...

www.VIKRAMAVAHINI.com
ಕನ್ನಡ ದಿನಪತ್ರಿಕೆ
PRGI NO: KARKAN/2018/78481
ವಿಕ್ರಮ ವಾಹಿನಿ

## ನುಡಿ ವಾಹಿನಿ

ಸೂರ್ಯ ನಿಮ್ಮನ್ನು ಎಬ್ಬಿಸುವ ತನಕ ನೀವು ಮಲಗಿಕೊಂಡರೆ ನೀವು ಅಪಯಶಸ್ವಿಯಾಗುತ್ತೀರಿ. ನೀವು ಯಾವತ್ತಿನಿಂದ ಸೂರ್ಯನನ್ನು ಎಬ್ಬಿಸುತ್ತಿರೋ ಅವತ್ತಿನಿಂದ ನೀವು ಯಶಸ್ಸಿನೆಡೆಗೆ ಸಾಗುತ್ತೀರಿ.

## ದಿನ ಪಂಚಾಂಗ

ಸೆಪ್ಟಂಬರ್, 17–2026, ಗುರುವಾರ ವರ್ಷ ಋತು,
ಭಾದ್ರಪದ ಮಾಸ, ಶುದ್ಧ ಪಕ್ಷ
ಷಷ್ಠಿ ತಿಥಿ ಬೆ.10:10
ಅನುರಾಧ ನಕ್ಷತ್ರ ರಾ.8:25
ರಾಹುಕಾಲ ಮ 1:45–3:16
ಕನ್ಯಾ ಸಂಕ್ರಮಣ, ಸೂರ್ಯಷಷ್ಠಿ, ಕಾರ್ತಿಕೇಯಸ್ವಾಮಿ ದರ್ಶನ, ವಡ್ನಾಳ್ ಸ್ವರ್ಣಗೌರೀ ಉತ್ಸವ, ವಡ್ನಾಳ ಬನ್ನಿಹಟ್ಟಿ ವಿಶ್ವಕರ್ಮ ಸ್ಥಾಪಿತ ನಿಲಯ ಸ್ವರ್ಣಗೌರಿ ವ್ರತ

## ಆಧ್ಯಾತ್ಮ

# 'ಉಷಃಪಾನ ಹಾಗೂ ನಾಸಾಪಾನದಿಂದ ಶತಾಯುಷಿ ಜೀವನ ಸಾಧ್ಯ'



● ವಿಕ್ರಮ ವಾಹಿನಿ । ಗೋಕರ್ಣ

ಸೂರ್ಯೋದಯಕ್ಕೂ ಪೂರ್ವದಲ್ಲಿ ಪ್ರತಿದಿನವೂ ನಿಯಮಿತವಾಗಿ ನೀರನ್ನು ಸೇವಿಸುವ 'ಉಷಃಪಾನ' ಹಾಗೂ 'ನಾಸಾಪಾನ' ಪದ್ಧತಿಗಳನ್ನು ಅಳವಡಿಸಿಕೊಂಡರೆ ಮನುಷ್ಯನು ಮುಪ್ಪು ಹಾಗೂ ರೋಗಗಳಿಲ್ಲದ ನೂರು ವರ್ಷಗಳ ಕಾಲದ ಆರೋಗ್ಯಯುತ ಜೀವನವನ್ನು ನಡೆಸಲು ಸಾಧ್ಯ ಎಂದು ಶ್ರೀರಾಮಚಂದ್ರಾಪುರ ಮಠದ ಜಗದ್ಗುರು ಶಂಕರಾಚಾರ್ಯ ಶ್ರೀಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳು ಹೇಳಿದರು.

ಗೋಕರ್ಣದ ಅಶೋಕೆಯ ಮೂಲಮಠದ ಪರಿಸರದಲ್ಲಿ ನಡೆಯುತ್ತಿರುವ 'ಅನ್ನಬ್ರಹ್ಮ ಚಾತುರ್ಮಾಸ್ಯ'ದ ಧರ್ಮಸಭೆಯಲ್ಲಿ 16.09.2026 ರಂದು 'ಅನ್ನಂ ಬ್ರಹ್ಮ' ಮಾಲಿಕೆಯಲ್ಲಿ 'ಉಷಃಪಾನ – ನಾಸಾಪಾನ' ಕುರಿತಾಗಿ

ಪ್ರವಚನ ಅನುಗ್ರಹಿಸಿದ ಶ್ರೀಗಳು, ಸೂರ್ಯೋದಯಕ್ಕೂ ಪೂರ್ವದಲ್ಲಿ ಪ್ರತಿದಿನ ಎಂಟು ಬೊಗಸೆ ನೀರನ್ನು ಸೇವಿಸುವುದನ್ನು 'ಉಷಃಪಾನ' ಎಂದು ಕರೆಯಲಾಗಿದ್ದು, ಆಯುರ್ವೇದ ಹಾಗೂ ಯೋಗಶಾಸ್ತ್ರದಲ್ಲಿ ಈ ಕುರಿತಾಗಿ ಉಲ್ಲೇಖಗಳಿದ್ದು, ಪ್ರತಿದಿನ ಇದನ್ನು ಆಚರಿಸುವಂತೆ ಸೂಚಿಸಲಾಗಿದೆ. ಉಷಃಪಾನದಿಂದ ಎಲ್ಲಾ ರೋಗಗಳ ನಿವಾರಣೆಯ ಜೊತೆಗೆ ಮುಪ್ಪನ್ನು ಇದು ನಿವಾರಿಸುತ್ತದೆ ಮತ್ತು ಮನುಷ್ಯನು ಶತಾಯುಷಿಯಾಗುತ್ತಾನೆ ಎಂದು ಇದರ ಉಪಯೋಗವನ್ನು ಹೇಳಿದ್ದು, ಬೆಳಗ್ಗೆ ಎದ್ದು ಶೌಚಕ್ರಿಯೆಯನ್ನು ಮಾಡುವುದಕ್ಕೂ ಮೊದಲೇ ಇದನ್ನು ಆಚರಿಸಬೇಕು ಎಂದರು.

ಉಷಃಪಾನವನ್ನು ಒಂದನೇ ವಯಸ್ಸಿಗೇ ಆರಂಭಿಸಬಹುದಾಗಿದ್ದು, ಹಂತಹಂತವಾಗಿ ನೀರಿನ ಸೇವನೆಯನ್ನು ಹೆಚ್ಚಿಸುತ್ತಾ ಹೋಗಬೇಕು. ಹದಿನಾರನೇಯ ವಯಸ್ಸಿಗೆ ಬರುವಾಗ ಅದು ಎಂಟು ಬೊಗಸೆ ಆಗುವಂತೆ ಹೊಂದಿಸಿಕೊಳ್ಳಬೇಕು. ಈ ಕ್ರಿಯೆಗಾಗಿ ನೀರನ್ನು ರಾತ್ರಿ ಶೇಖರಿಸಿಡುವಾಗ ತಾಮ್ರ ಅಥವಾ ಯಾವುದಾದರೂ ಉತ್ತಮ ಪಾತ್ರೆಯಲ್ಲಿಯೇ ನೀರನ್ನು ಶೇಖರಿಸಿಡಬೇಕು ಎಂದು ಕಿವಿಮಾತು ಹೇಳಿದರು.

ಸೂರ್ಯೋದಯಕ್ಕೂ ಪೂರ್ವದಲ್ಲಿ ಮೂಗಿನ ಹೊಳ್ಳೆಗಳಿಂದ ನೀರನ್ನು ಸೇವಿಸುವ ಕ್ರಮಕ್ಕೆ 'ನಾಸಾಪಾನ' ಎಂದು ಯೋಗ ಹಾಗೂ ಆಯುರ್ವೇದದಲ್ಲಿ ಉಲ್ಲೇಖವಿದ್ದು, ಇದರಿಂದ ಬುದ್ಧಿ ಚುರುಕಾಗುವ ಜೊತೆಗೆ ಕಣ್ಣಿನ ದೃಷ್ಟಿ ಹೆಚ್ಚುತ್ತದೆ. ಇದಕ್ಕೆ ಜಲ ನೇತಿ, ಜಲ ನಸ್ಯ ಎಂಬ ಹೆಸರೂ ಇದ್ದು, ಯೋಗಶಾಸ್ತ್ರವು ಪ್ರತಿದಿನ ಇದನ್ನು ಆಚರಿಸುವುದರಿಂದ ದಿವ್ಯದೃಷ್ಟಿ ಪ್ರಾಪ್ತವಾಗುತ್ತದೆ ಎಂದು ಹೇಳಿದೆ.

ನಿಧಾನವಾಗಿ ಅಭ್ಯಾಸ ಮಾಡುತ್ತಾ ಕಲಿಯಬೇಕಾದ ಕ್ರಿಯೆ ಇದಾಗಿದ್ದು, ಈ ಕ್ರಮದಲ್ಲಿ ಸುಮಾರು ಮೂರು ಬೊಗಸೆ ನೀರನ್ನು ಸೇವಿಸಬೇಕು. ಹಾಗೆಯೇ ಕೆಲವು ಸಂದರ್ಭದಲ್ಲಿ ಈ ಕ್ರಿಯೆಯನ್ನು ಮಾಡಬಾರದು ಎಂಬ ನಿಷೇಧವಿದ್ದು, ಎಚ್ಚರಿಕೆಯಿಂದ ಇದನ್ನು ಮಾಡಬೇಕು ಎಂದು ನೇತಿಯ ಕ್ರಮವನ್ನು ವಿವರಿಸಿದರು.

ಮಿಂಚು, ಸಮುದ್ರದ ಆಳದಲ್ಲಿರುವ ವಡವಾಗ್ನಿ ಹಾಗೂ ಜಠರಾಗ್ನಿಗಳಿಗೆ ನೀರೇ ಇಂಧನವಾಗಿದ್ದು, ನೀರಿನಿಂದಲೇ ಈ ಮೂರು ಅಗ್ನಿಗಳುಗಳು ಪ್ರಜ್ವಲಿಸುತ್ತದೆ. ಹಾಗಾಗಿ ಉಷಃಪಾನದಿಂದ ಜಠರಾಗ್ನಿ ಮಂದವಾಗುವುದಿಲ್ಲ ಎಂದ ಶ್ರೀಗಳು, ಈ ಪ್ರವಚನ ಮಾಲಿಕೆಯಲ್ಲಿ ಉಲ್ಲೇಖಿಸಿರುವ ವಿಚಾರಗಳು ಕೇವಲ ಪುಸ್ತಕದ ಬದನೇ ಕಾಯಿಯಲ್ಲ.

ಇಲ್ಲಿ ಉಲ್ಲೇಖಿಸುತ್ತಿರುವ ಹಲವು ವಿಚಾರಗಳು ನಾವು ಆಚರಿಸಿ ನೋಡಿರುವ ಅಂಶಗಳನ್ನೇ ಉಲ್ಲೇಖಿಸುತ್ತಿದ್ದು, ಸಮಾಜ ಇದನ್ನು ಅಳವಡಿಸಿಕೊಂಡು ಆರೋಗ್ಯಯುತವಾಗಬೇಕು ಎಂದು ಅಭಿಪ್ರಾಯಪಟ್ಟರು.

ಕರ್ಣಾಟಕ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಘವೇಂದ್ರ ಭಟ್, ವೇ.ಬ್ರ. ರವೀಶ್ ತಂತ್ರಿ, ಹಿರಿಯ ಸಾಹಿತಿ ಭುವನೇಶ್ವರೀ ಹೆಗಡೆ ಉಪಸ್ಥಿತರಿದ್ದು, ಶ್ರೀಗಳ ಆಶೀರ್ವಾದ ಪಡೆದರು. ಶಿವರಾಮಚಂದ್ರ ಶಿವಾಲ ಕುಟುಂಬದವರು ಗುರುಭಿಕ್ಷಾ ಸೇವೆ ಸಮರ್ಪಿಸಿದರು. ರಾಜಾರಾಮ ಮರಿಗದ್ದೆ ದಂಪತಿಗಳು ದಿನಪ್ರಧಾನರಾಗಿ ಉಪಸ್ಥಿತರಿದ್ದರು.

**ಘನಪಾರಾಯಣ ಪ್ರಾರಂಭ:** ಚಾತುರ್ಮಾಸ್ಯದ ಶುಭ ಸಂದರ್ಭದಲ್ಲಿ ಪ್ರತಿವರ್ಷದಂತೆ ಈ ವರ್ಷವೂ ಕೃಷ್ಣ ಯಜುರ್ವೇದದ ತೈತ್ತಿರೀಯ ಶಾಖೆಯ ಘನಪಾರಾಯಣವು ವೇ.ಬ್ರ. ಪಳ್ಳತ್ತಡ್ಕ ಶಂಕರನಾರಾಯಣ ಭಟ್ಟ ಘನಪಾಠಿಗಳ ನೇತೃತ್ವದಲ್ಲಿ ನಾಡಿನ ಪ್ರಮುಖ ಹತ್ತು ಘನಪಾಠಿಗಳಿಂದ ಪ್ರಾರಂಭವಾಯಿತು.

ಸೆಪ್ಟೆಂಬರ್ 23ರ ವರೆಗೆ ಘನಪಾರಾಯಣ ನಡೆಯಲಿದ್ದು, ವಿಶಿಷ್ಟವಾದ ಕ್ರಮದಲ್ಲಿ ವೇದ ಮಂತ್ರಗಳನ್ನು ಉಚ್ಚರಿಸುವ ಪದ್ಧತಿ ಘನಪಾಠವಾಗಿದೆ. ವೇದ ಪಾರಾಯಣದಲ್ಲಿ ಒಟ್ಟು 8 ಪ್ರಕಾರದ ವಿಕೃತಿ ಪಾಠಗಳಿದ್ದು, ಅವುಗಳಲ್ಲಿ ಘನಪಾಠವು ಅತ್ಯಂತ ಶ್ರೇಷ್ಠ ಹಾಗೂ ಕಠಿಣವಾದದ್ದು ಎಂದು ಪರಿಗಣಿಸಲಾಗಿದೆ.

# 'ಹರೇ ಶ್ರೀನಿವಾಸ' ಘೋಷವನ್ನು ಮೊಳಗಿಸಿದ ದಾಸಸಾಹಿತ್ಯದ ಸಾರಥಿ ಶ್ರೀ ಅಪ್ಪಣ್ಣಾಚಾರ್ಯರು ಇನ್ನಿಲ್ಲ

1ನೇ ಪುಟದಿಂದ

ಇಂತಹ ಅನೇಕ ಅಪೂರ್ವ ಕೃತಿಗಳು ಪ್ರಕಟವಾಗಲು ಅಪ್ಪಣ್ಣಾಚಾರ್ಯರ ಸಂಪಾದಕತ್ವ, ಆಸಕ್ತಿ ಮತ್ತು ಸಂಘಟನಾ ಶಕ್ತಿ ಪ್ರಮುಖವಾಗಿ ನೆರವಾಯಿತು.

**ಸುಳಾದಿ ಮತ್ತು ಚಕ್ರಾಬ್ಜಮಂಡಲದ ಅಧ್ಯಯನ**

ಶ್ರೀ ವಿಜಯದಾಸಾರ್ಯರು ರಚಿಸಿರುವ ಕಂಕಣಾಕಾರ ಸುಳಾದಿ ಹಾಗೂ ಚಕ್ರಾಬ್ಜಮಂಡಲ ಕುರಿತಾಗಿ ಶ್ರೀ ಅಪ್ಪಣ್ಣಾಚಾರ್ಯರು ವಿಶೇಷ ಅಧ್ಯಯನ ನಡೆಸಿದ್ದರು. ಈ ಎರಡೂ ವಿಷಯಗಳ ಕುರಿತು ಅಧಿಕಾರಯುತವಾಗಿ ಮಾತನಾಡಬಲ್ಲ ಕೆಲವೇ ವಿದ್ವಾಂಸರಲ್ಲಿ ಅವರು ಒಬ್ಬರಾಗಿದ್ದರು.

ದಾಸಸಾಹಿತ್ಯದ ಅಪಾರ ಸಂಪತ್ತಿನಲ್ಲಿ ಸಾಮಾನ್ಯ ಓದುಗರ ಕಣ್ಣಿಗೆ ಸುಲಭವಾಗಿ ಗೋಚರಿಸದ ತಾತ್ವಿಕ, ಸಂಕೇತಾತ್ಮಕ ಹಾಗೂ ಪರಂಪರಾಗತ ಆಯಾಮಗಳನ್ನು ಗುರುತಿಸಿ ಅವುಗಳ ಕುರಿತು ಅಧ್ಯಯನ ನಡೆಸಿದ ಅವರ ಪ್ರಯತ್ನಗಳು ಗಮನಾರ್ಹ.

**ಸೇವೆಗೆ ನಿವೃತ್ತಿಯಿಲ್ಲ**

ಟಿ.ಟಿ.ಡಿ.ಯ *'ದಾಸಸಾಹಿತ್ಯ ಪ್ರಾಜೆಕ್ಟ್'*ನ ವಿಶೇಷಾಧಿಕಾರಿಯ ಕಾರ್ಯಭಾರದಿಂದ ನಿವೃತ್ತರಾದ ನಂತರವೂ ಅಪ್ಪಣ್ಣಾಚಾರ್ಯರ ದಾಸಸಾಹಿತ್ಯ ಸೇವೆಗೆ ವಿರಾಮ ದೊರೆಯಲಿಲ್ಲ.

ಮಂತ್ರಾಲಯದ ಶ್ರೀರಾಘವೇಂದ್ರಮಠಾಧೀಶರಾದ ಪರಮಪೂಜ್ಯ ಶ್ರೀ ಶ್ರೀ ಸುಬುಧೇಂದ್ರತೀರ್ಥರ ವಿಶೇಷ ಆಸಕ್ತಿಯಿಂದ ಕಾರ್ಯತತ್ಪರವಾಗಿರುವ *'ಶ್ರೀಗುರುಸಾರ್ವಭೌಮ ದಾಸಸಾಹಿತ್ಯ ಪ್ರಾಜೆಕ್ಟ್'*ನ ವಿಶೇಷಾಧಿಕಾರಿಗಳಾಗಿ ಅವರು ತಮ್ಮ ಸಾರಸ್ವತ ಸೇವೆಯನ್ನು ಮುಂದುವರಿಸಿದರು.

ವಯಸ್ಸು ದೇಹಕ್ಕೆ ಮಾತ್ರ; ಸೇವೆಗೆ ಅಲ್ಲ ಎಂಬುದನ್ನು ತಮ್ಮ ಕಾರ್ಯಚಟುವಟಿಕೆಗಳಿಂದಲೇ ಅವರು ತೋರಿಸಿದರು.

ದಾಸಸಾಹಿತ್ಯದ ಕುರಿತು ಹಲವು ಯೋಜನೆಗಳನ್ನು ರೂಪಿಸಿ, ಅದರ ಸಂರಕ್ಷಣೆ, ಅಧ್ಯಯನ ಮತ್ತು ಪ್ರಸಾರದ ಕಾರ್ಯದಲ್ಲಿ ನಿರಂತರವಾಗಿ ತೊಡಗಿಸಿಕೊಂಡಿದ್ದರು.

ಪ್ರತಿವರ್ಷ ಶ್ರೀರಾಘವೇಂದ್ರಸ್ವಾಮಿಗಳ ವರ್ಧಂತಿ ಹಾಗೂ ಪಟ್ಟಾಭಿಷೇಕೋತ್ಸವದ ಸಂಸ್ಮರಣಾರ್ಥ ಅರ್ಚಕ ಶ್ರೀ ಪರಿಮಳಾಚಾರ್ಯರು ಆಯೋಜಿಸುವ 'ಶ್ರೀರಾಘವೇಂದ್ರ ಸಪ್ತಾಹ' ಕಾರ್ಯಕ್ರಮದಲ್ಲಿಯೂ ಅವರು ತಮ್ಮ ಇಳಿವಯಸ್ಸನ್ನೂ ಲೆಕ್ಕಿಸದೆ ಉತ್ಸಾಹದಿಂದ ಭಾಗವಹಿಸುತ್ತಿದ್ದರು. ಶ್ರೀಹರಿ–ವಾಯು–ಗುರುಗಳ ಸೇವೆಯೇ ತಮ್ಮ ಬದುಕಿನ ಧ್ಯೇಯ ಎಂಬ ಭಾವ ಅವರ ನಡೆ–ನುಡಿಗಳಲ್ಲಿ ಸದಾ ಪ್ರತಿಫಲಿಸುತ್ತಿತ್ತು.

ಅಪ್ಪಣ್ಣಾಚಾರ್ಯರ ಬದುಕನ್ನು ಅವಲೋಕಿಸಿದಾಗ, ದಾಸಸಾಹಿತ್ಯವು ಅವರಿಗೆ ಕೇವಲ ಅಧ್ಯಯನದ ವಿಷಯವಾಗಿರಲಿಲ್ಲ;

ಅದು ಅನುಷ್ಠಾನ, ಪ್ರಸಾರ ಮತ್ತು ಸಮಾಜಸೇವೆಯ ಮಾರ್ಗವಾಗಿತ್ತು. ಗ್ರಂಥದಲ್ಲಿದ್ದ ದಾಸವಾಣಿಯನ್ನು ಭಜನಾಮಂದಿರಗಳಿಗೆ, ಭಜನಾಮಂದಿರಗಳಿಂದ ಮನೆಮನೆಗೆ, ಅಲ್ಲಿಂದ ಜನಮನಕ್ಕೆ ಕೊಂಡೊಯ್ದ ಸಾರಥ್ಯ ಅವರದು.

ಒಬ್ಬ ವಿದ್ವಾಂಸನ ಪಾಂಡಿತ್ಯವು ಪುಸ್ತಕದ ಪುಟಗಳಲ್ಲಿ ಉಳಿಯದೆ, ಸಮಾಜದ ಉಸಿರಾಗಬೇಕು ಎಂಬುದಕ್ಕೆ ಶ್ರೀ ಕೌತಾಳಂ ಅಪ್ಪಣ್ಣಾಚಾರ್ಯರ ಜೀವನವೇ ಒಂದು ನಿದರ್ಶನ.

ದಾಸರ ಪದಗಳಿಗೆ ಜನಧ್ವನಿ ನೀಡಿದವರು ಅವರು. ಭಕ್ತಿಗೆ ಭಜನೆಯ ರೂಪ ನೀಡಿದವರು ಅವರು. ದಾಸಸಾಹಿತ್ಯಕ್ಕೆ ಸಂಘಟಿತ ಪ್ರಸಾರದ ವೇದಿಕೆ ಕಲ್ಪಿಸಿದವರು ಅವರು. 'ಹರೇ ಶ್ರೀನಿವಾಸ' ಎಂಬ

ಘೋಷ ದಕ್ಷಿಣಭಾರತದ ಅನೇಕ ನೆಲಗಳಲ್ಲಿ ಅನುರಣಿಸಲು ಕಾರಣೀಭೂತರಾದ ಮಹನೀಯರಲ್ಲಿ ಅಪ್ಪಣ್ಣಾಚಾರ್ಯರ ಸ್ಥಾನ ವಿಶಿಷ್ಟವಾದದ್ದು.

ಅವರ ದೇಹ ಭೌತಿಕವಾಗಿ ನಮ್ಮೊಂದಿಗಿಲ್ಲದಿದ್ದರೂ, ಅವರು ಬೆಳೆಸಿದ ಭಜನಾಮಂಡಳಿಗಳ ನಾದದಲ್ಲಿ, ಸಂಪಾದಿಸಿ ಪ್ರಕಟಿಸಿದ ದಾಸಕೃತಿಗಳ ಅಕ್ಷರಗಳಲ್ಲಿ, ಸಂಶೋಧನೆಗೆ ತೆರೆದಿಟ್ಟ ವಿಚಾರಗಳಲ್ಲಿ ಮತ್ತು 'ಹರೇ ಶ್ರೀನಿವಾಸ' ಎಂಬ ಭಕ್ತಿಘೋಷದಲ್ಲಿ ಅವರ ಸಾನ್ನಿಧ್ಯ ನಿರಂತರ.

ಶ್ರೀಮಾಧವ, ಮಧ್ವ ಹಾಗೂ ಶ್ರೀಹರಿ–ವಾಯು–ಗುರುಗಳ ಅನುಗ್ರಹದಿಂದ ಶ್ರೀ ಕೌತಾಳಂ ಅಪ್ಪಣ್ಣಾಚಾರ್ಯರ ಆತ್ಮಕ್ಕೆ ಸದ್ಗತಿ ದೊರೆಯಲಿ. ಅವರು ನಡೆಸಿದ ದಾಸಸಾಹಿತ್ಯ ಸೇವೆಯ ಪರಂಪರೆ ಮತ್ತಷ್ಟು ವಿಸ್ತರಿಸಲಿ. ಅವರ ಸಾರಸ್ವತ ಸಾನ್ನಿಧ್ಯವು ಮುಂದಿನ ಪೀಳಿಗೆಗಳಿಗೂ ಪ್ರೇರಣೆಯಾಗಲಿ ಎಂದು ಪ್ರಾರ್ಥಿಸೋಣ.

# 'ನೂತನ ಜಿಲ್ಲಾ ಅಧ್ಯಕ್ಷರಿಗೆ ಮಾರ್ಗದರ್ಶನ ನೀಡಲು ಕೇಂದ್ರದ ನಾಯಕರಿಂದ ಸಭೆ'



ಕೆಪಿಸಿಸಿ ಕಚೇರಿಯಲ್ಲಿ ಬುಧವಾರ ನಡೆದ ಜಿಲ್ಲಾ ಕಾಂಗ್ರೆಸ್ ನೂತನ ಅಧ್ಯಕ್ಷರ ಸಭೆಯಲ್ಲಿ ಸಿಎಂ ಡಿ ಕೆ ಶಿವಕುಮಾರ್ ಅವರು ಭಾಗವಹಿಸಿದರು. ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ ಸಿ ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೆವಾಲ, ಕೆಪಿಸಿಸಿ ಅಧ್ಯಕ್ಷರಾದ ಬಿ ಕೆ ಹರಿಪ್ರಸಾದ್, ನಿಕಟಪೂರ್ವ ಮುಖ್ಯಮಂತ್ರಿ ಸಿದ್ದರಾಮಯ್ಯ, ಎಐಸಿಸಿ ಕಾರ್ಯದರ್ಶಿ ಗೋಪಿನಾಥ್ ಪಳನಿಯಪ್ಪನ್, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಮಂಜುನಾಥ್ ಭಂಡಾರಿ, ವಸಂತ್ ಕುಮಾರ್ ಅವರು ಉಪಸ್ಥಿತರಿದ್ದರು.

● ವಿಕ್ರಮ ವಾಹಿನಿ । ಬೆಂಗಳೂರು

"ನೂತನವಾಗಿ ಜಿಲ್ಲಾ ಅಧ್ಯಕ್ಷರು ನೇಮಕಗೊಂಡಿದ್ದು, ಅವರಿಗೆ ಮಾರ್ಗದರ್ಶನ ನೀಡಲು ಹೈಕಮಾಂಡ್ ನಾಯಕರು ಸಭೆ ಕರೆದಿದ್ದಾರೆ" ಎಂದು ಸಿಎಂ ಡಿ ಕೆ ಶಿವಕುಮಾರ್ ತಿಳಿಸಿದರು.

ಸದಾಶಿವನಗರದಲ್ಲಿ ಮಾಧ್ಯಮಗಳ ಪ್ರಶ್ನೆಗಳಿಗೆ ಶಿವಕುಮಾರ್ ಅವರು ಬುಧವಾರ ಪ್ರತಿಕ್ರಿಯೆ ನೀಡಿದರು. ಸುರ್ಜೇವಾಲ ಅವರು ಆಗಮಿಸಿರುವ ಬಗ್ಗೆ ಕೇಳಿದಾಗ ಅವರು ಈ ರೀತಿ ಉತ್ತರಿಸಿದರು.

ಗುರುವಾರ 3 ದಿನಗಳ ಕಾಲ ವಿವಿಧ ಜಿಲ್ಲೆಗಳ ಪ್ರವಾಸದ ಬಗ್ಗೆ ಕೇಳಿದಾಗ, "ಬುಧವಾರ ಕಲಬುರಗಿ, ಮಂಗಳೂರು, ಉಡುಪಿ, ಚಿಕ್ಕಮಗಳೂರು, ಹಾಸನ ಜಿಲ್ಲೆಗಳ ಪ್ರವಾಸ ಮಾಡಲಿದ್ದೇನೆ. ವಿಧಾನ ಮಂಡಲ ಅಧಿವೇಶನದಲ್ಲಿ ಬರಗಾಲ ಹಾಗೂ ಕಸ್ತೂರಿ ರಂಗನ್ ವರದಿಯ ಕುರಿತಂತೆ ಚರ್ಚೆ ನಡೆಯಲಿದೆ" ಎಂದರು. ಜಿಲ್ಲಾ ಅಧ್ಯಕ್ಷರ ನೇಮಕದ ಬಳಿಕ ಪಕ್ಷದ ಸಂಘಟನೆ ಬಲಪಡಿಸುವ ಕುರಿತು ಸಭೆಯಲ್ಲಿ ಪ್ರಮುಖವಾಗಿ ಚರ್ಚಿಸಲಾಗುವುದು ಎಂದು ಅವರು ತಿಳಿಸಿದರು.

# ತ್ಯಾಜ್ಯ ನಿರ್ವಹಣೆಯಲ್ಲಿ ನಿರ್ಲಕ್ಷ್ಯ: ಪಿವಿಆರ್, ಫೋರಂ ಮಾಲ್‌ಗೆ ದಂಡ

● ವಿಕ್ರಮ ವಾಹಿನಿ । ಬೆಂಗಳೂರು

ಅಸಮರ್ಪಕ ತ್ಯಾಜ್ಯ ನಿರ್ವಹಣೆ ಹಾಗೂ ನಿಷೇಧಿತ ಏಕಬಳಕೆ ಪ್ಲಾಸ್ಟಿಕ್ ಬಳಕೆ ಮಾಡಿದ್ದ ವಾಣಿಜ್ಯ ಸಂಸ್ಥೆಗಳ ವಿರುದ್ಧ ಬೆಂಗಳೂರು ದಕ್ಷಿಣ ನಗರ ಪಾಲಿಕೆ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ ಒಟ್ಟು ರೂ 1,25,839 ದಂಡ ವಸೂಲಿ ಮಾಡಿದ್ದಾರೆ.

ಪಾಲಿಕೆ ಆಯುಕ್ತ ಕೆ.ಎನ್. ರಮೇಶ್ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಹೊಸೂರು ರಸ್ತೆಯ ಪಿವಿಆರ್ ಸಿನಿಮಾಸ್‌ಗೆ ರೂ 75 ಸಾವಿರ ದಂಡ ವಿಧಿಸಲಾಗಿದೆ. ಹಸಿ ಮತ್ತು ಒಣ ಕಸವನ್ನು ಮೂಲದಲ್ಲೇ ಸಮರ್ಪಕವಾಗಿ ವಿಂಗಡಿಸದಿದ್ದಕ್ಕೆ ರೂ 50 ಸಾವಿರ ಹಾಗೂ ನಿಷೇಧಿತ ಏಕಬಳಕೆ ಪ್ಲಾಸ್ಟಿಕ್ ಬಳಕೆಗೆ ರೂ 25 ಸಾವಿರ ದಂಡ ವಿಧಿಸಲಾಗಿದೆ.

ಕನಕಪುರ ರಸ್ತೆಯ ಶಾಪ್‌ವೆಲ್ ಸೂಪರ್ ಮಾರ್ಕೆಟ್ ಬಳಿ ಫೋರಂ ಮಾಲ್‌ಗೆ ಸೇರಿದ ಎಸ್‌ಟಿಪಿ ತ್ಯಾಜ್ಯವನ್ನು ಅಕ್ರಮವಾಗಿ ಸುರಿದಿರುವುದು ತಪಾಸಣೆ ವೇಳೆ ಪತ್ತೆಯಾಗಿದೆ. ಈ ಹಿನ್ನೆಲೆಯಲ್ಲಿ ಮಾಲ್‌ಗೆ ರೂ 50,839 ದಂಡ ವಿಧಿಸಿ ಸ್ಥಳದಲ್ಲೇ ವಸೂಲಿ ಮಾಡಲಾಗಿದೆ.

ಮಾಲ್‌ಗಳು, ಚಿತ್ರಮಂದಿರಗಳು, ಹೋಟೆಲ್‌ಗಳು ಸೇರಿದಂತೆ ವಾಣಿಜ್ಯ ಸಂಸ್ಥೆಗಳ ವಿರುದ್ಧ ಮುಂದೆಯೂ ನಿರಂತರ ತಪಾಸಣೆ ನಡೆಸಲಾಗುವುದು. ನಿಯಮ ಉಲ್ಲಂಘಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಆಯುಕ್ತ ಕೆ.ಎನ್. ರಮೇಶ್ ಎಚ್ಚರಿಕೆ ನೀಡಿದ್ದಾರೆ.

# "ಯುಪಿಎಸ್‌ಸಿ ಮಾದರಿ ಕೆಪಿಎಸ್‌ಸಿಯಲ್ಲಿ ಅಳವಡಿಸಿ"

● ವಿಕ್ರಮ ವಾಹಿನಿ । ಬೆಂಗಳೂರು

ಪಿ.ಸಿ. ಹೋಟಾ ಸಮಿತಿ ವರದಿ ಹಾಗೂ ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ಅನುಸರಿಸುತ್ತಿರುವ ನಿಯಮಾವಳಿ ಮತ್ತು ಪ್ರಕ್ರಿಯೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದಲ್ಲಿ (ಕೆಪಿಎಸ್‌ಸಿ) ಕೂಡಲೇ ಅಳವಡಿಸಿ, ಆಯೋಗಕ್ಕೆ ಸೂಕ್ತ ಕಾಯಕಲ್ಪ ನೀಡಬೇಕು ಎಂದು ಕಾಂಗ್ರೆಸ್ ಮುಖಂಡರ ನಿಯೋಗ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಿದೆ.

ಕೆಪಿಸಿಸಿ ಕಚೇರಿಯಲ್ಲಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ ನಿಯೋಗ, ಇತ್ತೀಚಿನ ಕೆಪಿಎಸ್‌ಸಿ ಅಕ್ರಮಗಳಿಂದಾಗಿ ಉದ್ಯೋಗಾಕಾಂಕ್ಷಿಗಳು ಹಾಗೂ ಸಾರ್ವಜನಿಕರಲ್ಲಿ ಆಯೋಗದ ಮೇಲಿನ ವಿಶ್ವಾಸ ಕುಸಿದಿದೆ.

ಇದರಿಂದ ಸರ್ಕಾರದ ಆಡಳಿತದ ಮೇಲೂ ಪ್ರತಿಕೂಲ ಪರಿಣಾಮ ಉಂಟಾಗಿದ್ದು, ಸರ್ಕಾರ ತಕ್ಷಣ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಮನವಿಯಲ್ಲಿ ಒತ್ತಾಯಿಸಿದೆ.

**ನೇಮಕಾತಿ ಪ್ರಕ್ರಿಯೆ ರದ್ದುಪಡಿಸಲು ಮನವಿ**

ಇತ್ತೀಚಿನ ಅವಧಿಯಲ್ಲಿ ಅಧ್ಯಕ್ಷರು, ಸದಸ್ಯರು ಹಾಗೂ ಪರೀಕ್ಷಾ ನಿಯಂತ್ರಕರ ನೇತೃತ್ವದಲ್ಲಿ ನಡೆದಿರುವ ನೇಮಕಾತಿ ಪ್ರಕ್ರಿಯೆಗಳನ್ನು ರದ್ದುಗೊಳಿಸಿ, ಆಯೋಗದಲ್ಲಿ ನಡೆದಿರುವ ಅಕ್ರಮಗಳ ಕುರಿತು ಸಮಗ್ರ ತನಿಖೆ ನಡೆಸಬೇಕು ಎಂದು ಮುಖಂಡರು ಕೋರಿದ್ದಾರೆ.

ತಪ್ಪಿತಸ್ಥ ಅಧ್ಯಕ್ಷರು ಮತ್ತು ಸದಸ್ಯರ ವಿರುದ್ಧ ಸಂವಿಧಾನದ ಅನುಚ್ಛೇದ 317ರ ಅಡಿಯಲ್ಲಿ ಕ್ರಮ ಕೈಗೊಳ್ಳಲು ರಾಜ್ಯ ಸರ್ಕಾರ ಮುಂದಾಗಬೇಕು. ತನಿಖೆ ಪೂರ್ಣಗೊಳ್ಳುವವರೆಗೆ ಕಳಂಕಿತರೆಂದು ಆರೋಪಿಸಲಾಗಿರುವ ಅಧ್ಯಕ್ಷರು ಹಾಗೂ ಸದಸ್ಯರನ್ನು ಅಮಾನತುಗೊಳಿಸಬೇಕು ಮತ್ತು ತಪ್ಪಿತಸ್ಥ ಪರೀಕ್ಷಾ ನಿಯಂತ್ರಕರ ವಿರುದ್ಧವೂ ಶಿಸ್ತು ಹಾಗೂ ಕಾನೂನು ಕ್ರಮ ಜರುಗಿಸಬೇಕು ಎಂದು ಮನವಿ ಮಾಡಲಾಗಿದೆ.

**ಆಸ್ತಿ ವಿವರ ಕಡ್ಡಾಯಗೊಳಿಸಲು ಸಲಹೆ**

ಆಯೋಗದ ಅಧ್ಯಕ್ಷರು, ಸದಸ್ಯರು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಭ್ರಷ್ಟಾಚಾರದ ಮೂಲಕ ಆಸ್ತಿ ಗಳಿಸಿರುವುದು ತನಿಖೆಯಲ್ಲಿ ದೃಢಪಟ್ಟರೆ, ಅಂತಹ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡು ಕಾನೂನು ಕ್ರಮ ಕೈಗೊಳ್ಳಬೇಕು ಎಂದು ನಿಯೋಗ ಒತ್ತಾಯಿಸಿದೆ.

ಮುಂದಿನ ದಿನಗಳಲ್ಲಿ ಅಧ್ಯಕ್ಷರು ಮತ್ತು ಸದಸ್ಯರಾಗಿ ನೇಮಕಗೊಳ್ಳುವವರು ತಮ್ಮ ಹಾಗೂ ಕುಟುಂಬ ಸದಸ್ಯರ ಸ್ಥಿರ ಮತ್ತು ಚರಾಸ್ತಿಗಳ ವಿವರವನ್ನು ಪ್ರತಿವರ್ಷ ಲೋಕಾಯುಕ್ತಕ್ಕೆ ಸಲ್ಲಿಸುವಂತೆ ಕಾನೂನು ರೂಪಿಸಬೇಕು ಎಂದು ಸಲಹೆ ನೀಡಿದೆ.

**ಸಂದರ್ಶನಕ್ಕೆ ಸಿಸಿಟಿವಿ ಕಣ್ಗಾವಲು**

ಕೆಪಿಎಸ್‌ಸಿ ಅಧ್ಯಕ್ಷರು ಮತ್ತು ಸದಸ್ಯರ ನೇಮಕಾತಿ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ತರಲು ಶೋಧನಾ ಸಮಿತಿ ರಚಿಸಿ, ಅದರ ಶಿಫಾರಸಿನ ಆಧಾರದ ಮೇಲೆ ನೇಮಕ ಮಾಡುವ ವ್ಯವಸ್ಥೆ ಜಾರಿಗೆ ತರಬೇಕು ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಆಯೋಗದ ಸಂದರ್ಶನ ಪ್ರಕ್ರಿಯೆಯನ್ನು ಸಿಸಿಟಿವಿ ಕಣ್ಗಾವಲಿನಲ್ಲಿ ನಡೆಸಬೇಕು. ಸಂದರ್ಶನಕ್ಕೆ ಸಂಬಂಧಿಸಿದ ದೃಶ್ಯಗಳು ಹಾಗೂ ದಾಖಲೆಗಳನ್ನು ಕನಿಷ್ಠ ಮೂರು ವರ್ಷ ಸಂರಕ್ಷಿಸುವಂತೆ ಕಾನೂನು ರೂಪಿಸಬೇಕು ಎಂದು ಮುಖಂಡರು ಒತ್ತಾಯಿಸಿದ್ದಾರೆ.

**ಸಣ್ಣ ಸಮಿತಿ ರಚನೆಗೆ ಆಗ್ರಹ**

ಕೆಪಿಎಸ್‌ಸಿಯ ನೇಮಕಾತಿ ಪ್ರಕ್ರಿಯೆ ಸುಗಮವಾಗಿ ಮುಂದುವರಿಯಲು ನಿಷ್ಠಾವಂತ, ಪ್ರಾಮಾಣಿಕ ಹಾಗೂ ದಕ್ಷ ವ್ಯಕ್ತಿಗಳನ್ನು ಒಳಗೊಂಡ ಸಣ್ಣ ಸಮಿತಿ ರಚಿಸಬೇಕು.

ಈ ವ್ಯವಸ್ಥೆ ಜಾರಿಗೆ ಬರುವವರೆಗೆ ಸರ್ಕಾರ ಯಾವುದೇ ಹೊಸ ನೇಮಕಾತಿ ಪ್ರಸ್ತಾವನೆಯನ್ನು ಆಯೋಗಕ್ಕೆ ಕಳುಹಿಸಬಾರದು ಎಂದು ಮನವಿ ಮಾಡಲಾಗಿದೆ.

ಮಾಜಿ ಸಂಸದರಾದ ಉಗ್ರಪ್ಪ, ಬಿ.ಎಲ್. ಶಂಕರ್, ಎಲ್. ಹನುಮಂತಯ್ಯ, ಚಂದ್ರಪ್ಪ, ಮುದ್ದಹನುಮೇಗೌಡ, ಮಾಜಿ ಸಚಿವರಾದ ಪಿ.ಜಿ.ಆರ್. ಸಿಂಧ್ಯ, ಎಚ್.ಎಂ. ರೇವಣ್ಣ, ರಾಣಿ ಸತೀಶ್, ಮಾಜಿ ಸಭಾಪತಿ ವಿ.ಆರ್. ಸುದರ್ಶನ್, ಮಾಜಿ ಶಾಸಕರಾದ ಪಿ.ಆರ್. ರಮೇಶ್, ಕೊಂಡಜ್ಜಿ ಮೋಹನ್, ಹಿರಿಯ ಸಾಹಿತಿ ಸಿ.ಎಸ್. ದ್ವಾರಕನಾಥ್ ಸೇರಿದಂತೆ ಹಲವರು ನಿಯೋಗದಲ್ಲಿದ್ದರು.



ಸಿಎಂ ಡಿ ಕೆ ಶಿವಕುಮಾರ್ ಅವರನ್ನು ದಕ್ಷಿಣ ಕಮಾಂಡ್‌ನ ಜನರಲ್ ಆಫಿಸರ್ ಕಮಾಂಡಿಂಗ್ (ಜಿಒಸಿ) ಆಗಿರುವ ಲೆಫ್ಟಿನೆಂಟ್ ಜನರಲ್ ರಾಜೇಶ್ ಪುಷ್ಕರ್ ಅವರು ವಿಧಾನಸೌಧದಲ್ಲಿ ಬುಧವಾರ ಭೇಟಿ ಮಾಡಿ ಚರ್ಚೆ ನಡೆಸಿದರು. ದಕ್ಷಿಣ ಭಾರತ ಪ್ರದೇಶದ ಜಿಒಸಿ ಹಾಗೂ ಕರ್ನಾಟಕ ಮತ್ತು ಕೇರಳ (K&K) ಉಪ ಪ್ರದೇಶದ ಜಿಒಸಿಗಳು, ಅಪರ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ಬಿಡಿಎ ಆಯುಕ್ತರಾದ ಮಣಿವಣ್ಣನ್ ಅವರು ಉಪಸ್ಥಿತರಿದ್ದರು.

# ಪಾಕ್ ಸೌಂದರ್ಯವರ್ಧಕ ಕ್ರೀಮ್‌ಗಳ ವಿರುದ್ಧ ಎಚ್ಚರಿಕೆ

1ನೇ ಪುಟದಿಂದ

ಈ ಎರಡು ಕ್ರೀಮ್‌ಗಳಿಗೆ ಭಾರತದಲ್ಲಿ ಮಾರಾಟ ಮಾಡಲು ಅಗತ್ಯವಿರುವ ಆಮದು ನೋಂದಣಿ ಪ್ರಮಾಣಪತ್ರವನ್ನು ಸಮರ್ಥ ಪ್ರಾಧಿಕಾರದಿಂದ ನೀಡಲಾಗಿಲ್ಲ ಎಂದು ಕೇಂದ್ರ ಔಷಧ ನಿಯಂತ್ರಣ ಸಂಸ್ಥೆ ತಿಳಿಸಿದೆ. ಹೀಗಾಗಿ 'ಗೋರಿ ಬ್ಯೂಟಿ ಕ್ರೀಮ್' ಹಾಗೂ 'ಚಾಂದನಿ ವೈಟ್ನಿಂಗ್ ಕ್ರೀಮ್' ಖರೀದಿಸದಂತೆ ಮತ್ತು ಈಗಾಗಲೇ ಖರೀದಿಸಿದ್ದರೆ ಬಳಸದಂತೆ ಗ್ರಾಹಕರಿಗೆ ಸೂಚಿಸಲಾಗಿದೆ. ಸೌಂದರ್ಯವರ್ಧಕ ಉತ್ಪನ್ನಗಳ ತಯಾರಿಕೆ ಮತ್ತು ಆಮದನ್ನು ಡ್ರಗ್ಸ್ ಅಂಡ್ ಕಾಸ್ಮೆಟಿಕ್ಸ್ ಕಾಯ್ದೆ, 1940 ಹಾಗೂ ಕಾಸ್ಮೆಟಿಕ್ಸ್ ನಿಯಮಗಳು, 2020ರ ಅಡಿಯಲ್ಲಿ ನಿಯಂತ್ರಿಸಲಾಗುತ್ತದೆ.




ಬೆಂಗಳೂರು ಜಯನಗರದ ಜಯರಾಮ ಸೇವಾ ಮಂಡಲಿಯಲ್ಲಿ ನಡೆದ ವೇದಾಂತ ಮಾಲಾ ಕಲಾ ಕುಟೀರದ 14ನೇ ವಾರ್ಷಿಕೋತ್ಸವದಲ್ಲಿ ವಿದುಷಿ ಮಾಲಾ ವೆಂಕಟೇಶ್ ಹಾಗೂ ವಿದುಷಿ ವಿನಂತಿ ಮಿಥುನ್ ಅವರ ಶಿಷ್ಯವೃಂದದಿಂದ 'ದೇವಿ ತತ್ವ' ಆಧಾರಿತ ನೃತ್ಯಪ್ರದರ್ಶನ ನಡೆಯಿತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾದ ಸಂಗೀತಾ ಕಣ್ಣನ್, ವಿ. ಲತಾ ರಮೇಶ್ ಹಾಗೂ ಛಾಯಾಪತಿ ಕಂಚೀಬೈಲು, ಗೌರವ ಅತಿಥಿಗಳಾದ ಶ್ರೀನಿವಾಸ ಸಾಸ್ತಾನ್, ಗೌರಿ ಸಾಸ್ತಾನ್, ನಾಗರಾಜ್ ಉಪಾಧ್ಯಾಯ, ವೇದಾಂತ ಮಾಲಾ ಕಲಾ ಕುಟೀರದ ಅಧ್ಯಕ್ಷೆ ಶಶಿಕಲಾ ವಿಠ್ಠಲ್ ಉಪಸ್ಥಿತರಿದ್ದರು. ನಿರೂಪಣೆಯನ್ನು ರಚ್ನಾ ದಿವಾಕರ್ ನಿರ್ವಹಿಸಿದರು.

ವಿಕ್ರಮ ವಾಹಿನಿ
ಸತ್ಯದ ಹಾದಿ । ಜನಪರ ದನಿ । ರಾಷ್ಟ್ರೀಯ ದೃಷ್ಟಿ
ಸೆಪ್ಟಂಬರ್, 17- 2026
ಗುರುವಾರ
ರಾಜಧಾನಿ
www.VIKRAMAVAHINI.com
|| ಕನ್ನಡ ದಿನಪತ್ರಿಕೆ ||
PRGI NO: KARKAN/2018/78481



# ಖಂಡ್ರೆ ಕನಸು ನನಸು: ಇಂಚೂರು ವೃಕ್ಷೋದ್ಯಾನದ ನೋಟವೇ ಸೊಗಸು

## ■ ರೂ 5 ಕೋಟಿ ವೆಚ್ಚದಲ್ಲಿ 13.34 ಎಕರೆ ಪ್ರದೇಶದಲ್ಲಿ ಪರಿಸರ ಪ್ರವಾಸೋದ್ಯಮ ತಾಣ ■

● ವಿಕ್ರಮ ವಾಹಿನಿ । ಬೀದರ್

'ಮನಸ್ಸಿದ್ದರೆ ಮಾರ್ಗ' ಎಂಬುದಕ್ಕೆ ಭಾಲ್ಕಿ ತಾಲೂಕಿನ ಇಂಚೂರಿನಲ್ಲಿ ನಿರ್ಮಾಣಗೊಂಡಿರುವ ಡಾ. ಚನ್ನಬಸವ ಪಟ್ಟದ್ದೇವರು ವೃಕ್ಷೋದ್ಯಾನ ಜ್ವಲಂತ ನಿದರ್ಶನವಾಗಿದೆ. ರೂ 5 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಈ ಸುಂದರ ಉದ್ಯಾನ ಬುಧವಾರ ಲೋಕಾರ್ಪಣೆಯಾಗಿದೆ.

ಬೃಹತ್ ಕಲ್ಲುಬಂಡೆಗಳ ನಡುವೆ ಆಧುನಿಕ ಸ್ಪರ್ಶದ ಪ್ರವೇಶದ್ವಾರ, ಖಗ-ಮೃಗಗಳ ಪ್ರತಿಕೃತಿಗಳು, ಹಚ್ಚಹಸಿರಿನ ನಡುವೆ ಕಾಲುದಾರಿಗಳು, ವಿಶ್ರಾಂತಿ ತಂಗುದಾಣಗಳು, ಮುಕ್ತ ಬಯಲು ರಂಗಮಂದಿರ, ಮಕ್ಕಳ ಆಟದ ತಾಣ, ಚಿಟ್ಟೆಗಳ ಉದ್ಯಾನ ಹಾಗೂ ವೀಕ್ಷಣಾ ಗೋಪುರ ಉದ್ಯಾನದ ಪ್ರಮುಖ ಆಕರ್ಷಣೆಗಳಾಗಿವೆ. ಜಲಧಾರೆಯ ಬಳಿ ಮೊಸಳೆ, ನವಿಲು, ಬಕಪಕ್ಷಿ, ಕೃಷ್ಣಮೃಗ, ಹುಲಿ, ಚಿರತೆ ಸೇರಿದಂತೆ ವಿವಿಧ ಪ್ರಾಣಿಗಳ ಪ್ರತಿಕೃತಿಗಳು ಪ್ರವಾಸಿಗರ ಗಮನ ಸೆಳೆಯುತ್ತವೆ.







**ಖಂಡ್ರೆ ಪರಿಕಲ್ಪನೆ:** ಬೀದರ್ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ. ಖಂಡ್ರೆ ಅವರ ಪರಿಕಲ್ಪನೆ ಹಾಗೂ ಇಚ್ಛಾಶಕ್ತಿಯಿಂದ ಈ ಉದ್ಯಾನ ರೂಪುಗೊಂಡಿದೆ. ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರಾಗಿದ್ದ ಅವಧಿಯಲ್ಲಿ ಬೀದರ್ ಭಾಗದಲ್ಲಿ ಪರಿಸರ ಪ್ರವಾಸೋದ್ಯಮ ತಾಣಗಳನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಯೋಜನೆ ರೂಪಿಸಿದ್ದರು. ಕಾಮಗಾರಿ ಆರಂಭದಿಂದ ಉದ್ಯಾನ ಪೂರ್ಣಗೊಳ್ಳುವವರೆಗೆ ಅವರು ನಿರಂತರ ಮೇಲ್ವಿಚಾರಣೆ ನಡೆಸಿದ್ದಾರೆ.

ಭಾಲ್ಕಿ-ಲಾತೂರ್ ಹೆದ್ದಾರಿಗೆ ಹೊಂದಿಕೊಂಡಿರುವ ಇಂಚೂರು, ಭಾಲ್ಕಿ ಪಟ್ಟಣದಿಂದ ಕೇವಲ 10 ಕಿ.ಮೀ. ದೂರದಲ್ಲಿದೆ. ಒಟ್ಟು 13.34 ಎಕರೆ ಪ್ರದೇಶದಲ್ಲಿ ಉದ್ಯಾನ ನಿರ್ಮಾಣಗೊಂಡಿದ್ದು, ಸುಮಾರು 10 ಎಕರೆ ಪ್ರದೇಶದಲ್ಲಿ ವೃಕ್ಷೋದ್ಯಾನ ಅಭಿವೃದ್ಧಿಪಡಿಸಲಾಗಿದೆ.

**ಸಂಗೀತ ಕಾರಂಜಿ:** ಕೆ.ಆರ್.ಎಸ್. ಬಳಿಯ ಬೃಂದಾವನ ಗಾರ್ಡನ್ ಮಾದರಿಯಲ್ಲಿ ಉದ್ಯಾನದಲ್ಲಿ ಸಂಗೀತ ಕಾರಂಜಿ ಅಳವಡಿಸುವ ಚಿಂತನೆಯೂ ಇದೆ. ಸಂಗೀತದ ಲಯಕ್ಕೆ ತಕ್ಕಂತೆ ನೀರಿನ ಚಿಲುಮೆಗಳು ನರ್ತಿಸುವ ಈ ಕಾರಂಜಿ ಮುಂದಿನ ದಿನಗಳಲ್ಲಿ ಪ್ರವಾಸಿಗರಿಗೆ ಪ್ರಮುಖ ಆಕರ್ಷಣೆಯಾಗಲಿದೆ.

**ಪರಿಸರ ಶಿಕ್ಷಣ:** ಕಲ್ಯಾಣ ಕರ್ನಾಟಕ ಭಾಗದಲ್ಲಿ ಹಸಿರು ಹೊದಿಕೆ ಕಡಿಮೆ ಇರುವ ಹಿನ್ನೆಲೆಯಲ್ಲಿ ವೃಕ್ಷೋದ್ಯಾನದ ಮೂಲಕ ಹಸಿರು ಹೆಚ್ಚಿಸಿ ಪರಿಸರ ಸಂರಕ್ಷಣೆಯ ಅರಿವು ಮೂಡಿಸುವ ಉದ್ದೇಶ ಹೊಂದಲಾಗಿದೆ.

ಮರಗಳು ಕಾರ್ಬನ್ ಡೈಆಕ್ಸೈಡ್ ಹೀರಿಕೊಂಡು ಆಮ್ಲಜನಕ ನೀಡುವ ಮಹತ್ವವನ್ನು ಜನರಿಗೆ ತಿಳಿಸುವುದರ ಜೊತೆಗೆ, ಮಕ್ಕಳಿಗೆ ವಿವಿಧ ಮರ-ಗಿಡಗಳ ಪರಿಚಯ ಮಾಡಿಕೊಡುವ ಪರಿಸರ ಪಾಠಶಾಲೆಯಾಗಿಯೂ ಉದ್ಯಾನ ಕಾರ್ಯನಿರ್ವಹಿಸಲಿದೆ.

**ಚಿಟ್ಟೆಗಳ ಉದ್ಯಾನ:** ಸುಮಾರು ಅರ್ಧ ಎಕರೆ ಪ್ರದೇಶದಲ್ಲಿ ಚಿಟ್ಟೆಯ ಆಕಾರದಲ್ಲಿ ಚಿಟ್ಟೆಗಳ ಉದ್ಯಾನ ನಿರ್ಮಿಸಲಾಗಿದೆ. ಇಲ್ಲಿ 50 ವಿವಿಧ ಜಾತಿಗಳ ಸುಮಾರು 2,500 ಸಸಿಗಳನ್ನು ನೆಡಲಾಗಿದ್ದು, ಚಿಟ್ಟೆಗಳಿಗೆ ಅಗತ್ಯವಿರುವ ನೆಕ್ಟರ್ ಹಾಗೂ ಹೋಸ್ಟ್ ಸಸ್ಯಗಳನ್ನು ಬೆಳೆಸಲಾಗಿದೆ. ಮುಂದಿನ ದಿನಗಳಲ್ಲಿ ಜೀವಂತ ಚಿಟ್ಟೆಗಳು ಹಾರಾಡುವ ಚಿಟ್ಟೆ ಪಾರ್ಕ್ ರೂಪಿಸುವ ಉದ್ದೇಶವಿದೆ.

**ಮಿಯಾವಾಕಿ ಅರಣ್ಯ:** ಜೆನ್-ಜಿ ಪ್ರವಾಸಿಗರನ್ನು ಗಮನದಲ್ಲಿಟ್ಟುಕೊಂಡು ಚಿಟ್ಟೆ ಸೆಲ್ಫಿ ಪಾಯಿಂಟ್ ಕೂಡ ನಿರ್ಮಿಸಲಾಗಿದೆ. ಸುಮಾರು ಒಂದು ಎಕರೆ ಪ್ರದೇಶದಲ್ಲಿ 40 ಜಾತಿಗಳ 10 ಸಾವಿರ ಸಸಿಗಳನ್ನು ನೆಟ್ಟು ಮಿಯಾವಾಕಿ ಅರಣ್ಯ ಬೆಳೆಸಲಾಗಿದೆ. ಬಿದಿರು ಸಂರಕ್ಷಣೆಗೂ ಆದ್ಯತೆ ನೀಡಲಾಗಿದೆ.

ಒಟ್ಟಾರೆ ಕಡಿಮೆ ಪ್ರದೇಶದಲ್ಲಿ, ಕಡಿಮೆ ವೆಚ್ಚದಲ್ಲಿ ಪರಿಸರ ಸಂರಕ್ಷಣೆ, ಜೀವವೈವಿಧ್ಯ, ಪರಿಸರ ಶಿಕ್ಷಣ, ಸಾರ್ವಜನಿಕ ಮನರಂಜನೆ ಹಾಗೂ ಪ್ರವಾಸೋದ್ಯಮವನ್ನು ಒಟ್ಟುಗೂಡಿಸಿ ಅಭಿವೃದ್ಧಿಪಡಿಸಿರುವ ಇಂಚೂರು ವೃಕ್ಷೋದ್ಯಾನ, ಬೀದರ್ ಮಾತ್ರವಲ್ಲದೆ ನೆರೆಯ ಜಿಲ್ಲೆಗಳ ಪ್ರವಾಸಿಗರನ್ನೂ ಸೆಳೆಯುವ ಹೊಸ ತಾಣವಾಗಿ ರೂಪುಗೊಂಡಿದೆ.

# ಎಸ್.ಐ.ಆರ್ ನಿಂದ 1.07 ಕೋಟಿ ಮತದಾರರು ಡಿಲೀಟ್: ಕೆ.ಸಿ. ವೇಣುಗೋಪಾಲ್ ಆಂತಕ

● ವಿಕ್ರಮ ವಾಹಿನಿ । ಬೆಂಗಳೂರು

ಕರ್ನಾಟಕದಲ್ಲಿ ಮತದಾರರ ಪಟ್ಟಿ ವಿಶೇಷ ತೀವ್ರ ಸಮಗ್ರ ಪರಿಷ್ಕರಣೆ ಪ್ರಕ್ರಿಯೆಯಡಿ ಸುಮಾರು 1.07 ಕೋಟಿ ಮತದಾರರ ಹೆಸರನ್ನು ಕೈಬಿಡಲಾಗಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಹೇಳಿದ್ದಾರೆ.

ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿದ ವೇಣುಗೋಪಾಲ್ ಅವರು, ರಾಜ್ಯದ ಮತದಾರರ ಪಟ್ಟಿಯಿಂದ ಸುಮಾರು ಶೇ. 23 ರಷ್ಟು ಅಂದರೆ 1 ಕೋಟಿಗೂ ಅಧಿಕ ಮತದಾರರ ಹೆಸರನ್ನು ನಿಯಮಬಾಹಿರವಾಗಿ ಡಿಲೀಟ್ ಮಾಡಲಾಗಿದೆ ಎಂದು ಆರೋಪಿಸಿದರು.

ಫಾರ್ಮ್-7 ರ ವ್ಯಾಪಕ ದುರುಪಯೋಗದಿಂದಾಗಿ ಅರ್ಹ ಮತದಾರರ, ವಿಶೇಷವಾಗಿ ದಲಿತರು, ಆದಿವಾಸಿಗಳು, ಹಿಂದುಳಿದ ವರ್ಗಗಳು (ಔಃಅ) ಮತ್ತು ಅಲ್ಪಸಂಖ್ಯಾತ ಮತದಾರರ ಹೆಸರನ್ನು ವ್ಯವಸ್ಥಿತವಾಗಿ ತೆಗೆದುಹಾಕಲಾಗಿದೆ ಎಂದು ದೂರಿದ್ದಾರೆ.

ಈ ಸಂದರ್ಭದಲ್ಲೇ ನಿಜವಾದ ಕಾರಣದಿಂದಾಗಿ ಡಿಲೀಟ್ ಮಾಡಿದ್ದರೆ ಯಾರಿಗೂ ಸಮಸ್ಯೆ ಅನಿಸುತ್ತಿರಲಿಲ್ಲ. ಆದರೆ ಕಳೆದ ನಾಲ್ಕೈದು ವರ್ಷದಿಂದ ಚುನಾವಣಾ ಆಯೋಗದ ಕ್ರಮಗಳನ್ನು ನೋಡುತ್ತಿದ್ದೇವೆ. ನಮಗೆ ಸರಿಯಾದ ಉತ್ತರವನ್ನೂ ನೀಡುತ್ತಿಲ್ಲ. ಚುನಾವಣೆಗಳನ್ನು ಜನರ ಆದೇಶದ ಮೂಲಕ ಗೆಲ್ಲಬೇಕೇ ಹೊರತು 'ವೋಟ್ ಚೋರಿ' (ಮತಗಳ ಕಳ್ಳತನ) ಮೂಲಕ ಅಲ್ಲ ಎಂದು ಕೇಂದ್ರದ ಬಿಜೆಪಿ ಸರ್ಕಾರವನ್ನು ಟೀಕಿಸಿದ್ದಾರೆ.

ಕರ್ನಾಟಕ ಮುಖ್ಯ ಚುನಾವಣಾಧಿಕಾರಿ ವಿ. ಅನ್ಬುಕುಮಾರ್ ಬಿಡುಗಡೆ ಮಾಡಿರುವ ಖಖಖ ಕರಡು ಮತದಾರರ ಪಟ್ಟಿಯ ಪ್ರಕಾರ, ರಾಜ್ಯದಲ್ಲಿ ಒಟ್ಟು 1,07,96,339 (1.07 ಕೋಟಿ) ಮತದಾರರ ಹೆಸರುಗಳನ್ನು ಪಟ್ಟಿಯಿಂದ ಕೈಬಿಡಲಾಗಿದೆ. ಈ ಭಾರಿ ಕಡಿತದ ನಂತರ ಕರ್ನಾಟಕದ ಕರಡು ಮತದಾರರ ಪಟ್ಟಿಯಲ್ಲಿ ಸದ್ಯ 4.46 ಕೋಟಿ ಮತದಾರರು ಮಾತ್ರ ಬಾಕಿ ಉಳಿದಿದ್ದಾರೆ.

# ಗೃಹಜ್ಯೋತಿ ಫಲಾನುಭವಿಗಳಿಗೆ ಶಾಕ್

● ವಿಕ್ರಮ ವಾಹಿನಿ । ಬೆಂಗಳೂರು

ಕಾಂಗ್ರೆಸ್ ಸರ್ಕಾರದ ಪ್ರಮುಖ ಗ್ಯಾರಂಟಿ ಯೋಜನೆಯಾದ ಗೃಹಜ್ಯೋತಿ ಅಡಿಯಲ್ಲಿ ಶೂನ್ಯ ಬಿಲ್ ಪಡೆಯುತ್ತಿದ್ದ ಕೆಲವು ಕುಟುಂಬಗಳಿಗೆ ಇದೀಗ ಸಾವಿರಾರು ರೂಪಾಯಿ ವಿದ್ಯುತ್ ಬಿಲ್ ಬರುತ್ತಿರುವ ಆರೋಪ ಕೇಳಿಬಂದಿದೆ.

ಬೆಂಗಳೂರಿನ ಶಿವಾಜಿನಗರ ಕ್ಷೇತ್ರದ ಭಾರತಿ ವಾರ್ಡ್‌ನ ಮಕಾನ್ ಕಾಂಪೌಂಡ್ ಪ್ರದೇಶದಲ್ಲಿ ಹಲವು ಮನೆಗಳಿಗೆ ಕಳೆದ ಕೆಲ ತಿಂಗಳಿಂದ ಶೂನ್ಯ ಬಿಲ್ ಬದಲಾಗಿ 1 ಸಾವಿರದಿಂದ 5 ಸಾವಿರದವರೆಗೆ ವಿದ್ಯುತ್ ಬಿಲ್ ಬಂದಿದೆ ಎಂದು ಸ್ಥಳೀಯರು ತಿಳಿಸಿದ್ದಾರೆ. ಈ ಕುರಿತು ಬೆಸ್ಕಾಂ ಅಧಿಕಾರಿಗಳ ಗಮನಕ್ಕೂ ತಂದರೂ ಸಮಸ್ಯೆ ಸಂಪೂರ್ಣವಾಗಿ ಬಗೆಹರಿದಿಲ್ಲ ಎಂದು ಅವರು ಆರೋಪಿಸಿದ್ದಾರೆ.

**ಮರುಪರಿಶೀಲನೆ ವೇಳೆ ತಾಂತ್ರಿಕ ಸಮಸ್ಯೆ**

ಬೆಸ್ಕಾಂ ಸಿಬ್ಬಂದಿ ಪ್ರಕಾರ, ಮೀಟರ್ ರೀಡರ್‌ಗಳು ಎಸ್‌ಐಆರ್ ಪ್ರಕ್ರಿಯೆ ಹಾಗೂ ಗೃಹಜ್ಯೋತಿ ಫಲಾನುಭವಿಗಳ ಮರುಪರಿಶೀಲನಾ ಕಾರ್ಯದಲ್ಲಿ ತೊಡಗಿರುವ ಹಿನ್ನೆಲೆಯಲ್ಲಿ ಕೆಲವು ಪ್ರದೇಶಗಳಲ್ಲಿ ತಾಂತ್ರಿಕ ಸಮಸ್ಯೆ ಉಂಟಾಗಿರುವ ಸಾಧ್ಯತೆಯಿದೆ.

ಅರ್ಹ ಕುಟುಂಬಗಳಿಗೆ 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ಒದಗಿಸುವ ಉದ್ದೇಶದ ಗೃಹಜ್ಯೋತಿ ಯೋಜನೆ ಜಾರಿಯಾಗಿ ಮೂರು ವರ್ಷಗಳಾಗಿವೆ. ರಾಜ್ಯದ ವಿವಿಧೆಡೆ ಶೂನ್ಯ ಬಿಲ್ ಬಾರದಿರುವ ಕುರಿತು ದೂರುಗಳು ಕೇಳಿಬರುತ್ತಿರುವ ಹಿನ್ನೆಲೆಯಲ್ಲಿ, ಸಮಸ್ಯೆಯನ್ನು ತ್ವರಿತವಾಗಿ ಪರಿಹರಿಸಬೇಕು ಎಂಬ ಒತ್ತಾಯ ವ್ಯಕ್ತವಾಗಿದೆ.

ಸ್ಥಳೀಯರ ಪ್ರಕಾರ, ನಿಯಮಿತವಾಗಿ ವಿದ್ಯುತ್ ಬಳಕೆ ಮಾಡುತ್ತಿದ್ದರೂ ಏಕಾಏಕಿ ಹೆಚ್ಚಿನ ಮೊತ್ತದ ಬಿಲ್‌ಗಳು ಬಂದಿರುವುದು ಆತಂಕಕ್ಕೆ ಕಾರಣವಾಗಿದೆ.

ಗೃಹಜ್ಯೋತಿ ಯೋಜನೆಯಡಿ ಅರ್ಹತೆ ಹೊಂದಿರುವ ಕುಟುಂಬಗಳಿಗೆ ಈ ಸಮಸ್ಯೆಯಿಂದ ಹೆಚ್ಚುವರಿ ಆರ್ಥಿಕ ಹೊರೆ ಉಂಟಾಗುವಂತಾಗಿದೆ.

ತಾಂತ್ರಿಕ ದೋಷವಿದ್ದಲ್ಲಿ ಅದನ್ನು ಶೀಘ್ರ ಸರಿಪಡಿಸಿ, ಅರ್ಹ ಫಲಾನುಭವಿಗಳಿಗೆ ಶೂನ್ಯ ಬಿಲ್ ವ್ಯವಸ್ಥೆ ಮುಂದುವರಿಸಬೇಕು ಎಂಬ ಆಗ್ರಹ ಕೇಳಿಬಂದಿದೆ.

# 'ಭಗವಂತನ ಇಚ್ಛೆಯೇ ಜೀವನದ ನಿಜವಾದ ಜಿಪಿಎಸ್'

● ವಿಕ್ರಮ ವಾಹಿನಿ । ನವಿ ಮುಂಬೈ

*ಪ್ರತಿಯೊಬ್ಬರ ಜೀವನದಲ್ಲಿಯೂ ಭಗವಂತನದ್ದೇ ಆದ ಯೋಜನೆ ಇರುತ್ತದೆ. ಗುರುಗಳು ಹಾಗೂ ಶಾಸ್ತ್ರಗಳು ತೋರಿಸುವ ಮಾರ್ಗವನ್ನು ಅನುಸರಿಸಿ, ಭಗವಂತನ ಸಂಕಲ್ಪದಂತೆ ನಡೆದಾಗ ಜೀವನ ಸಾರ್ಥಕವಾಗುತ್ತದೆ ಎಂದು ಶ್ರೀ ಪುತ್ತಿಗೆ ಮಠದ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು ಹೇಳಿದರು.*

*ನವಿ ಮುಂಬೈನ ಶ್ರೀ ಪುತ್ತಿಗೆ ಶಾಖಾ ಮಠದಲ್ಲಿ 53ನೇ ಚಾತುರ್ಮಾಸ್ಯ ವ್ರತ ಆಚರಿಸುತ್ತಿರುವ ಶ್ರೀಪಾದರ 65ನೇ ಜನ್ಮನಕ್ಷತ್ರ ಮಹೋತ್ಸವದ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಅವರು ಅನುಗ್ರಹ ಸಂದೇಶ ನೀಡಿದರು.*

*ಕಾರಿನ ಜಿಪಿಎಸ್ ಗಮ್ಯಸ್ಥಾನ ತಲುಪಲು ಮಾರ್ಗದರ್ಶನ ನೀಡುವಂತೆ, ಭಗವಂತನ ಇಚ್ಛೆಯೇ ನಮ್ಮ ಜೀವನದ ನಿಜವಾದ ಜಿಪಿಎಸ್. ಜೀವನದಲ್ಲಿ ಎದುರಾಗುವ ಘಟನೆಗಳು, ಅವಕಾಶಗಳು ಹಾಗೂ ಅನುಭವಗಳ ಮೂಲಕ ಭಗವಂತ ನಿರಂತರವಾಗಿ ಸೂಚನೆಗಳನ್ನು ನೀಡುತ್ತಿರುತ್ತಾನೆ. ಅವುಗಳನ್ನು ಗುರುತಿಸಿ, ಗುರುಗಳು ಮತ್ತು ಶಾಸ್ತ್ರಗಳ ಮಾರ್ಗದರ್ಶನದಲ್ಲಿ ನಡೆದರೆ ಆತನೇ ನಮ್ಮನ್ನು ಸರಿಯಾದ ಗಮ್ಯಸ್ಥಾನಕ್ಕೆ ಕರೆದೊಯ್ಯುತ್ತಾನೆ ಎಂದರು.*

*ಬಾಲ್ಯದಲ್ಲಿ ಸನ್ಯಾಸಿಯಾಗಬೇಕೆಂಬ ಯಾವುದೇ ಕಲ್ಪನೆ ಇರಲಿಲ್ಲ. ವಿಜ್ಞಾನಿಯಾಗಬೇಕೆಂಬ ಆಸೆಯಿತ್ತು. ಆದರೆ ಗುರುಗಳ ಆದೇಶ ಹಾಗೂ ಭಗವಂತನ ಸಂಕಲ್ಪದಂತೆ ಸನ್ಯಾಸ ಜೀವನ ಸ್ವೀಕರಿಸುವಂತಾಯಿತು. ಬದುಕಿನ ಪ್ರತಿಯೊಂದು ಪ್ರಮುಖ ಘಟನೆಯ ಹಿಂದೆಯೂ ದೈವಿಕ ಯೋಜನೆಯಿದೆ ಎಂಬುದು ತಮ್ಮ ಅನುಭವ ಎಂದು ಶ್ರೀಪಾದರು ತಿಳಿಸಿದರು.*

***ಸೇವೆಗೆ ಸಂಕಲ್ಪ:*** *ಜನ್ಮನಕ್ಷತ್ರ ಆಚರಣೆ ವ್ಯಕ್ತಿಯ ವೈಯಕ್ತಿಕ ಪ್ರಚಾರದ ಕಾರ್ಯಕ್ರಮವಾಗದೆ, ಕಳೆದ ಜೀವನವನ್ನು ಅವಲೋಕಿಸಿ ಭಗವಂತ ಹಾಗೂ ಗುರುಗಳಿಗೆ ಕೃತಜ್ಞತೆ ಸಲ್ಲಿಸುವ ಸಂದರ್ಭವಾಗಬೇಕು. ಮುಂದಿನ ದಿನಗಳಲ್ಲಿ ದೇಶ, ಧರ್ಮ ಹಾಗೂ ಸಮಾಜಕ್ಕಾಗಿ ಇನ್ನಷ್ಟು ಸೇವೆ ಮಾಡುವ ಸಂಕಲ್ಪ ಕೈಗೊಳ್ಳಬೇಕು ಎಂದು ಕರೆ ನೀಡಿದರು.*

*ತಮ್ಮ ದೀಕ್ಷಾಗುರು ಶ್ರೀ ಸುಜ್ಞಾನೇಂದ್ರ ತೀರ್ಥರು ಹಾಗೂ ಗುರು ಶ್ರೀ ವಿದ್ಯಾಮಾನ್ಯ ತೀರ್ಥರ ಮಾರ್ಗದರ್ಶನವನ್ನು ಸ್ಮರಿಸಿದ ಶ್ರೀಪಾದರು, ತಮ್ಮ ಧಾರ್ಮಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಕಾರ್ಯಗಳ ಹಿಂದೆ ಗುರುಪರಂಪರೆಯ ಅನುಗ್ರಹವೇ ಮೂಲಶಕ್ತಿ ಎಂದರು. ಶ್ರೀ ವಾದಿರಾಜ ಗುರುಸಾರ್ವಭೌಮರ ಭಕ್ತಿ, ಜ್ಞಾನ, ವೈರಾಗ್ಯ ಮತ್ತು ಸೇವಾಮನೋಭಾವ ತಮ್ಮ ಆದರ್ಶವಾಗಿದೆ ಎಂದು ಹೇಳಿದರು.*



***ಪ್ರತಿಭೆ ಸಮಾಜಕ್ಕೆ ಬಳಕೆಯಾಗಲಿ:*** *ಪ್ರತಿಯೊಬ್ಬರಲ್ಲೂ ಒಂದೊಂದು ವಿಶೇಷ ಪ್ರತಿಭೆ ಇರುತ್ತದೆ. ಬರವಣಿಗೆ, ಸಂಗೀತ, ಪ್ರವಚನ, ಸಂಘಟನೆ ಅಥವಾ ಸಮಾಜಸೇವೆ ಸೇರಿದಂತೆ ಯಾವುದೇ ಪ್ರತಿಭೆಯನ್ನು ವೈಯಕ್ತಿಕ ಕೀರ್ತಿಗಾಗಿ ಬಳಸದೆ, ಭಗವಂತನ ಸೇವೆ ಹಾಗೂ ಲೋಕಕಲ್ಯಾಣಕ್ಕಾಗಿ ಸಮರ್ಪಿಸಬೇಕು ಎಂದು ಶ್ರೀಪಾದರು ಸಲಹೆ ನೀಡಿದರು.*

*ಆರೋಗ್ಯವೆಂದರೆ ಕೇವಲ ಕಾಯಿಲೆಯಿಲ್ಲದಿರುವುದಲ್ಲ. ಮನಸ್ಸಿನ ನೆಮ್ಮದಿ, ಹೃದಯದ ಸಂತೋಷ ಹಾಗೂ ಪರಸ್ಪರ ಪ್ರೀತಿ-ವಿಶ್ವಾಸದಿಂದ ಬದುಕುವುದೂ ನಿಜವಾದ ಆರೋಗ್ಯ ಎಂದು ಹೇಳಿದರು.*

***ವಿಶೇಷ ಪೂಜೆ:*** *ಮಹೋತ್ಸವದ ಅಂಗವಾಗಿ ಜನ್ಮನಕ್ಷತ್ರ ಹೋಮ, ಸುದರ್ಶನ ಹೋಮ, ವಿರಜಾ ಹೋಮ ಹಾಗೂ ಶ್ರೀ ಉಪೇಂದ್ರ ವಿಠಲ ದೇವರಿಗೆ ವಿಶೇಷ ಪೂಜೆ ಮತ್ತು ಮಹಾಮಂಗಳಾರತಿ ನೆರವೇರಿತು. ದೇಶ-ವಿದೇಶಗಳ ಶ್ರೀ ಪುತ್ತಿಗೆ ಮಠದ ಶಾಖೆಗಳಲ್ಲಿಯೂ ವಿಶೇಷ ಪೂಜೆ, ಹೋಮ-ಹವನ, ಭಜನೆ ಹಾಗೂ ಅನ್ನಸಂತರ್ಪಣೆ ಆಯೋಜಿಸಲಾಗಿತ್ತು.*

*ಪ್ರಸಿದ್ಧ ವಿದ್ವಾಂಸರಾದ ಪ್ರ.ರಾ. ನಾಗರಹಳ್ಳಿ, ಪಂಜ ಭಾಸ್ಕರ ಭಟ್ ಹಾಗೂ ಮುಂಬೈನ ಪೇಜಾವರ ಮಠದ ಮುಖ್ಯಸ್ಥ ರಾಮದಾಸ ಉಪಾಧ್ಯಾಯರು ಅಭಿನಂದನಾ ಭಾಷಣ ಮಾಡಿ ಶ್ರೀಪಾದರ ಸುದೀರ್ಘ ಸನ್ಯಾಸ ಜೀವನ, ನಾಲ್ಕು ಪರ್ಯಾಯಗಳ ಸಾಧನೆ ಹಾಗೂ ವಿಶ್ವವ್ಯಾಪಿ ಶ್ರೀಕೃಷ್ಣ ಭಕ್ತಿಪ್ರಚಾರವನ್ನು ಕೊಂಡಾಡಿದರು.*

*ವಿವಿಧ ಕ್ಷೇತ್ರಗಳ ವಿದ್ವಾಂಸರು ಹಾಗೂ ಸಮಾಜಸೇವಕರನ್ನು ಸನ್ಮಾನಿಸಲಾಯಿತು. ಚಾತುರ್ಮಾಸ್ಯ ಸೇವಾ ಸಮಿತಿಯ ವತಿಯಿಂದ ಉದ್ಯಮಿ ಶಿವರಾಮ ಭಟ್, ಗೋಪಾಲ್ ಶೆಟ್ಟಿ ಹಾಗೂ ಸಮಿತಿಯ ಸದಸ್ಯರು ಶ್ರೀಪಾದರಿಗೆ ಬೃಹತ್ ಕಿರೀಟ ಮತ್ತು ಹಾರ ಸಮರ್ಪಿಸಿ ಗೌರವಿಸಿದರು. ಶ್ರೀ ಪುತ್ತಿಗೆ ವಿದ್ಯಾಪೀಠದ ಹಳೆಯ ವಿದ್ಯಾರ್ಥಿಗಳ ಸಂಘದ ವತಿಯಿಂದ ಗುರುನಮನ ಸಲ್ಲಿಸಲಾಯಿತು.*

*ಶ್ರೀಮಠದ ಅಂತಾರಾಷ್ಟ್ರೀಯ ಕಾರ್ಯದರ್ಶಿ ಪ್ರಸನ್ನ ಆಚಾರ್ಯ, ರತೀಶ್ ತಂತ್ರಿ, ನಾರಾಯಣ ಆಚಾರ್ಯ, ವಿಷ್ಣುಮೂರ್ತಿ ಉಪಾಧ್ಯಾಯ, ಎ.ಬಿ. ಕುಂಜಾರು ಸೇರಿದಂತೆ ವಿವಿಧ ಶಾಖಾಮಠಗಳ ಪ್ರಮುಖರು, ಮುಂಬೈ ಮಹಾನಗರದ ಭಕ್ತರು ಹಾಗೂ ಅಭಿಮಾನಿಗಳು ಉಪಸ್ಥಿತರಿದ್ದರು.*

*ಶ್ರೀ ಗುರುಪ್ರಸಾದ್ ಗಂಟ್ಲೂರು ಸ್ವಾಗತಿಸಿದರು. ಶ್ರೀಮಠದ ಕಲಾ ಕಾರ್ಯದರ್ಶಿ ರಮಣಾಚಾರ್ಯ ನಿರೂಪಿಸಿದರು. ಬಿ.ಆರ್. ಶೆಟ್ಟಿ ವಂದಿಸಿದರು. ಮಂತ್ರಾಕ್ಷತೆ, ತೀರ್ಥಪ್ರಸಾದ ಹಾಗೂ ಅನ್ನಸಂತರ್ಪಣೆಯೊಂದಿಗೆ ಮಹೋತ್ಸವ ಸಂಭ್ರಮದಿಂದ ಸಂಪನ್ನಗೊಂಡಿತು.*

# ವೈದ್ಯಕೀಯದಲ್ಲಿ 459 ಸೀಟು ಉಳಿಕೆ, ದಂತ ವೈದ್ಯಕೀಯದಲ್ಲಿ ಎಲ್ಲ ಸೀಟು ಖಾಲಿ

● ವಿಕ್ರಮ ವಾಹಿನಿ । ಬೆಂಗಳೂರು

ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್ ಗಳ ಪ್ರವೇಶಕ್ಕೆ ಎರಡನೇ ಸುತ್ತಿನ ಸೀಟು ಹಂಚಿಕೆಯ ಅಂತಿಮ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಬುಧವಾರ ಪ್ರಕಟಿಸಿದೆ.

ಈ ಸುತ್ತಿನಲ್ಲಿ ಸೀಟು ಹಂಚಿಕೆಯಾದ ಅಭ್ಯರ್ಥಿಗಳು ಸೆ.19ರೊಳಗೆ ನಿಗದಿತ ಶುಲ್ಕ ಪಾವತಿಸಿ, ಸೀಟು ಖಾತರಿ ಚೀಟಿ ಡೌನ್‌ಲೋಡ್ ಮಾಡಿಕೊಂಡು ಸೆ.21ರೊಳಗೆ ಕಾಲೇಜುಗಳಲ್ಲಿ ಕಡ್ಡಾಯವಾಗಿ ಪ್ರವೇಶ ಪಡೆಯಬೇಕು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್. ಪ್ರಸನ್ನ ಅವರು ತಿಳಿಸಿದ್ದಾರೆ.

ಒಟ್ಟು 12,010 ವೈದ್ಯಕೀಯ ಸೀಟುಗಳ ಪೈಕಿ 11,551 ಸೀಟು ಹಂಚಿಕೆಯಾಗಿದ್ದು, ಇನ್ನೂ 459 ಸೀಟು ಉಳಿದಿವೆ. ದಂತ ವೈದ್ಯಕೀಯ ಕೋರ್ಸ್ ನಲ್ಲಿ ಇದ್ದ ಎಲ್ಲ 2,689 ಸೀಟು ಹಂಚಿಕೆಯಾಗಿವೆ ಎಂದು ಅವರು ವಿವರಿಸಿದ್ದಾರೆ.

# 'ಯುಪಿಐ ಮೇಲಿನ ತೆರಿಗೆ ವಿರುದ್ಧ ದೇಶವೇ ಹೋರಾಟ ಮಾಡಬೇಕು'

● ವಿಕ್ರಮ ವಾಹಿನಿ । ಬೆಂಗಳೂರು

"ಯುಪಿಐ ವಹಿವಾಟಿನ ಮೇಲೆ ತೆರಿಗೆ ವಿಧಿಸಿರುವ ಕೇಂದ್ರ ಸರ್ಕಾರದ ವಿರುದ್ಧ ಇಡೀ ದೇಶ ಹೋರಾಟ ನಡೆಸಬೇಕು" ಎಂದು ಸಿಎಂ ಡಿ ಕೆ ಶಿವಕುಮಾರ್ ಅಭಿಪ್ರಾಯಪಟ್ಟರು.



ಕೆಪಿಸಿಸಿ ಕಚೇರಿಯ ಇಂದಿರಾ ಗಾಂಧಿ ಭವನದಲ್ಲಿ ನಡೆದ ಮಾಧ್ಯಮಗೋಷ್ಠಿ ವೇಳೆ ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗೆ ಶಿವಕುಮಾರ್ ಅವರು ಬುಧವಾರ ಪ್ರತಿಕ್ರಿಯೆ ನೀಡಿದರು.

ಯುಪಿಐ ವಹಿವಾಟಿನ ಮೇಲೆ ತೆರಿಗೆ ವಿಧಿಸಿರುವುದರ ವಿರುದ್ಧ ಕಾಂಗ್ರೆಸ್ ಹೋರಾಟ ಮಾಡುವುದೇ ಎಂದು ಕೇಳಿದಾಗ, "ಇದು ಕೇವಲ ಕಾಂಗ್ರೆಸ್ ಪಕ್ಷದ ವಿಚಾರವಲ್ಲ. ಇಡೀ ದೇಶದ ಸಮಸ್ಯೆಯಾಗಿದೆ. ಕಾಂಗ್ರೆಸ್ ಪಕ್ಷ ವಿರೋಧ ಪಕ್ಷವಾಗಿದ್ದು, ಜನಸಾಮಾನ್ಯರ ಹಿತ ಕಾಯಲು ಹೋರಾಟ ಮಾಡಲಿದೆ. ಹೀಗಾಗಿ ನಮ್ಮ ಪ್ರಧಾನ ಕಾರ್ಯದರ್ಶಿಗಳು ದೇಶದ ಜನರ ಪರವಾಗಿ ಮಾಧ್ಯಮಗೋಷ್ಠಿ ನಡೆಸಿ ದೇಶದ ಜನರಿಗೆ ಸಂದೇಶ ರವಾನಿಸಿದ್ದಾರೆ" ಎಂದು ತಿಳಿಸಿದರು.

# ನಾಳೆಯಿಂದ ಅ.17ರವರೆಗೆ ಸೇವಾ ಸಂಕಲ್ಪ ಅಭಿಯಾನ

● ವಿಕ್ರಮ ವಾಹಿನಿ । ಬೆಂಗಳೂರು

ಪ್ರಧಾನಿ ನರೇಂದ್ರ ಮೋದಿ ಅವರು 25 ವರ್ಷಗಳ ಸಾರ್ವಜನಿಕ ಜೀವನದಲ್ಲಿ ಯಾವುದೇ ಕಪ್ಪು ಚುಕ್ಕೆ ಇಲ್ಲದೆ ದೇಶವನ್ನು ಮುನ್ನಡೆಸುವ ಕೆಲಸ ಮಾಡುತ್ತಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಬಿಜೆಪಿ ಕಲೆ ಮತ್ತು ಸಾಂಸ್ಕೃತಿಕ ಪ್ರಕೋಷ್ಠದ ವತಿಯಿಂದ ಪ್ರಧಾನಿ ನರೇಂದ್ರ ಮೋದಿ ಅವರ 25 ವರ್ಷಗಳ ಸಾರ್ವಜನಿಕ ಸೇವೆ ಅಂಗವಾಗಿ ಆಯೋಜಿಸಿದ್ದ ಚಿತ್ರಕಲಾ ಪ್ರದರ್ಶನ ವೀಕ್ಷಿಸಿ ಅವರು ಮಾತನಾಡಿದರು.



ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರ ಅಪೇಕ್ಷೆಯಂತೆ ಸೆ.17ರಿಂದ ಅ.17ರವರೆಗೆ 'ಸೇವಾ ಸಂಕಲ್ಪ ಅಭಿಯಾನ' ಹಮ್ಮಿಕೊಳ್ಳಲಾಗಿದೆ. ಇದರ ಅಂಗವಾಗಿ ಜಗನ್ನಾಥ ಭವನದಲ್ಲಿ ರಾಜ್ಯದ ವಿವಿಧ ಭಾಗಗಳಲ್ಲದೆ ಅಸ್ಸಾಂ, ಪಶ್ಚಿಮ ಬಂಗಾಳ, ರಾಜಸ್ಥಾನ, ಮಧ್ಯಪ್ರದೇಶ ಸೇರಿದಂತೆ ವಿವಿಧ ರಾಜ್ಯಗಳಿಂದ ಆಗಮಿಸಿದ ಕಲಾವಿದರು ಪ್ರಧಾನಿ ಮೋದಿ ಅವರ ಸಾರ್ವಜನಿಕ ಸೇವೆ ಹಾಗೂ ಸಾಧನೆಗಳನ್ನು ಬಿಂಬಿಸುವ ಚಿತ್ರಕಲಾಕೃತಿಗಳನ್ನು ರಚಿಸಿದ್ದಾರೆ ಎಂದು ತಿಳಿಸಿದರು.

ಮೋದಿ ಅವರ ಸೇವೆ-ಸಾಧನೆಗಳನ್ನು ಬಿಂಬಿಸುವ ಚಿತ್ರಕಲಾ ಪ್ರದರ್ಶನ ಆಯೋಜಿಸಲಾಗಿದೆ.

ಅಭಿಯಾನದ ಅಂಗವಾಗಿ ಕಲಾವಿದರು ಪ್ರದರ್ಶಿಸಿದ ಕಲಾಕೃತಿಗಳು ಗಮನ ಸೆಳೆದಿದ್ದು, ಕಾರ್ಯಕ್ರಮ ಯಶಸ್ವಿಯಾಗಲು ಶ್ರಮಿಸಿದ ಪ್ರಕೋಷ್ಠಗಳ ಸಂಚಾಲಕರು ಹಾಗೂ ಬಿಜೆಪಿ ಕಲೆ ಮತ್ತು ಸಾಂಸ್ಕೃತಿಕ ಪ್ರಕೋಷ್ಠದ ಪ್ರಮುಖರನ್ನು ವಿಜಯೇಂದ್ರ ಅಭಿನಂದಿಸಿದರು. ಹೊರರಾಜ್ಯಗಳಿಂದ ಆಗಮಿಸಿ ಕಲಾಕೃತಿ ರಚಿಸಿದ ಎಲ್ಲ ಕಲಾವಿದರಿಗೆ ಕೃತಜ್ಞತೆ ಸಲ್ಲಿಸಿದರು.

# ಪಣತೂರಿನಲ್ಲಿ 45 ಎಕರೆ ವೃಕ್ಷೋದ್ಯಾನ ಲೋಕಾರ್ಪಣೆ



● ವಿಕ್ರಮ ವಾಹಿನಿ । ಬೆಂಗಳೂರು

ನಗರದ ಪೂರ್ವ ತಾಲೂಕಿನ ವರ್ತೂರು ಹೋಬಳಿಯ ಪಣತೂರು ಗ್ರಾಮದಲ್ಲಿ ಅರಣ್ಯ ಇಲಾಖೆಯ ನಗರವನ ಯೋಜನೆಯಡಿ 45 ಎಕರೆ ಪ್ರದೇಶದಲ್ಲಿ ಅಭಿವೃದ್ಧಿಪಡಿಸಿರುವ ವೃಕ್ಷೋದ್ಯಾನವನ್ನು ಅರಣ್ಯ ಸಚಿವ ರಾಮಲಿಂಗಾ ರೆಡ್ಡಿ ಉದ್ಘಾಟಿಸಿದರು.

ಪಣತೂರು ಗ್ರಾಮದಲ್ಲಿ ಅರಣ್ಯ ಇಲಾಖೆಯ ಸುಪರ್ದಿಯಲ್ಲಿ ಒಟ್ಟು 145 ಎಕರೆ ಪ್ರದೇಶವಿದ್ದು, ಅದರಲ್ಲಿ 45 ಎಕರೆ ಪ್ರದೇಶವನ್ನು ಕ್ವಾಲ್ಕಾಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ಸಿಎಸ್‌ಆರ್ ಅನುದಾನ ಹಾಗೂ 'ಸೇಟ್ರೀಸ್' ಎನ್‌ಜಿಒ ಸಹಯೋಗದಲ್ಲಿ ಅಭಿವೃದ್ಧಿಪಡಿಸಲಾಗಿದೆ.

ವಿವಿಧ ಜಾತಿಯ ಮರ-ಗಿಡಗಳು, ಪ್ರಾಣಿ ಹಾಗೂ ಪಕ್ಷಿ ಸಂಕುಲ ಹೊಂದಿರುವ ಈ ಪ್ರದೇಶವನ್ನು ನಗರವನವಾಗಿ ರೂಪಿಸಲಾಗಿದೆ.

**ರೂ 4.50 ಕೋಟಿ ವೆಚ್ಚ:** ವೃಕ್ಷೋದ್ಯಾನವನ್ನು ರೂ 4.50 ಕೋಟಿ ಸಿಎಸ್‌ಆರ್ ಅನುದಾನದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಹೆಚ್ಚುವರಿಯಾಗಿ ದೊರೆತಿರುವ ರೂ 1 ಕೋಟಿ ಸಿಎಸ್‌ಆರ್ ಅನುದಾನವನ್ನು ಉದ್ಯಾನದ ಸುತ್ತ ಕಾಂಪೌಂಡ್ ನಿರ್ಮಾಣ ಹಾಗೂ ಹಸಿರು ಅಭಿವೃದ್ಧಿಗೆ ಬಳಸಿಕೊಳ್ಳುವಂತೆ ಸಚಿವ ರಾಮಲಿಂಗಾ ರೆಡ್ಡಿ ಸೂಚಿಸಿದರು.

ಉಳಿದ 100 ಎಕರೆ ಅರಣ್ಯ ಪ್ರದೇಶವನ್ನೂ ಕ್ವಾಲ್ಕಾಮ್ ಸಂಸ್ಥೆಯೇ ಅಭಿವೃದ್ಧಿಪಡಿಸುವಂತೆ ಮನವಿ ಮಾಡಿದ ಸಚಿವರು, ಅಗತ್ಯವಿದ್ದಲ್ಲಿ ಅರಣ್ಯ ಇಲಾಖೆಯಿಂದಲೂ ಅನುದಾನ ಸಹಕಾರ ನೀಡಲಾಗುವುದು ಎಂದರು.

**ನಾಲ್ಕು ಕಡೆ ಬೃಹತ್ ಉದ್ಯಾನ:** ಬೆಂಗಳೂರು ನಗರದಲ್ಲಿ ಲಾಲ್‌ಬಾಗ್ ಮತ್ತು ಕಬ್ಬನ್ ಪಾರ್ಕ್ ಹೊರತುಪಡಿಸಿ ದೊಡ್ಡ ಪ್ರಮಾಣದ ಉದ್ಯಾನಗಳ ಕೊರತೆಯಿದೆ. ಈ ಹಿನ್ನೆಲೆಯಲ್ಲಿ ನಗರದ ಇನ್ನೂ ನಾಲ್ಕು ಕಡೆ ಇದೇ ಮಾದರಿಯ ಬೃಹತ್ ಉದ್ಯಾನಗಳನ್ನು ನಿರ್ಮಿಸಲು ಯೋಜನೆ ರೂಪಿಸಲಾಗುತ್ತಿದೆ ಎಂದು ಸಚಿವರು ತಿಳಿಸಿದರು.

ನಗರ ಪ್ರದೇಶದ ಜನರಿಗೆ ಹಸಿರು ವಾತಾವರಣ ಕಲ್ಪಿಸುವುದು, ಪರಿಸರ ಸಂರಕ್ಷಣೆ ಹಾಗೂ ಸಾರ್ವಜನಿಕರಿಗೆ ಆರೋಗ್ಯಕರ ಸೌಲಭ್ಯ ಒದಗಿಸುವುದು ನಗರವನದ ಪ್ರಮುಖ ಉದ್ದೇಶವಾಗಿದೆ ಎಂದರು.

**ಹಲವು ಸೌಲಭ್ಯ:** ವೃಕ್ಷೋದ್ಯಾನದಲ್ಲಿ ಸಾರ್ವಜನಿಕರ ಓಡಾಟಕ್ಕಾಗಿ ಎರಡು ಕಿ.ಮೀ. ಉದ್ದದ ಮುರಮ್ ಇಕೋ-ಟ್ರೇಲ್ ನಿರ್ಮಿಸಿ, ಸುತ್ತಲೂ ಕರ್ಬ್ ಸ್ಟೋನ್ ಅಳವಡಿಸಲಾಗಿದೆ. ನೀರಿನ ಸೌಲಭ್ಯಕ್ಕಾಗಿ ಕೊಳವೆಬಾವಿ, ಪಂಪ್ ಹಾಗೂ ಬೆಸ್ಕಾಂ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.

ವೀಕ್ಷಕರ ವಿಶ್ರಾಂತಿಗಾಗಿ ಪರ್ಗೋಲಾ, ಗಜಿಬೋ ಹಾಗೂ ನೀರಿನ ಟ್ಯಾಂಕ್‌ಗಳನ್ನು ನಿರ್ಮಿಸಲಾಗಿದೆ.

ಸಸ್ಯ, ಪ್ರಾಣಿ ಮತ್ತು ಪಕ್ಷಿಗಳ ಕುರಿತು ಮಾಹಿತಿ ನೀಡಲು ಕ್ಯೂಆರ್ ಕೋಡ್ ಹೊಂದಿರುವ ನಾಮಫಲಕ ಹಾಗೂ ಜಾಗೃತಿ ಫಲಕಗಳನ್ನು ಅಳವಡಿಸಲಾಗಿದೆ. ತೆರೆದ ಜಿಮ್, ಮಕ್ಕಳ ಆಟದ ಉಪಕರಣಗಳು, ಶೌಚಾಲಯ ಮತ್ತು ವಾಹನ ನಿಲುಗಡೆ ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ.

ಕಾರ್ಯಕ್ರಮದಲ್ಲಿ ಬೆಂಗಳೂರು ಕೇಂದ್ರ ಸಂಸದ ಪಿ.ಸಿ. ಮೋಹನ್, ಮಂಜುಳಾ ಅರವಿಂದ ಲಿಂಬಾವಳಿ, ಸಿಸಿಎಫ್‌ಗಳಾದ ಮೀನಾಕ್ಷಿ ನೇಗಿ, ಸ್ಮಿತಾ, ಚಕ್ರಪಾಣಿ, ಸಮಾಜ ಸೇವಕಿ ಅನುಪಮ ಹಾಗೂ ಅರಣ್ಯ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

www.VIKRAMAVAHINI.com
|| ಕನ್ನಡ ದಿನಪತ್ರಿಕೆ ||
PRGI NO: KARKAN/2018/78481

ಸತ್ಯದ ಹಾದಿ । ಜನಪರ ದನಿ । ರಾಷ್ಟ್ರೀಯ ದೃಷ್ಟಿ
ವಿಕ್ರಮ ವಾಹಿನಿ

# ಪೆಟ್ರೋಲ್ ಬಂಕ್‌ಗಳಲ್ಲಿ ತೂಕ-ಅಳತೆ ಅಕ್ರಮ

● ವಿಕ್ರಮ ವಾಹಿನಿ । ಬೆಂಗಳೂರು

ರಾಜ್ಯದ ಪೆಟ್ರೋಲ್ ಬಂಕ್‌ಗಳಲ್ಲಿ ಇಂಧನ ವಿತರಣೆ ವೇಳೆ ತೂಕ–ಅಳತೆಯಲ್ಲಿ ಅಕ್ರಮ ನಡೆಯುತ್ತಿರುವ ಆರೋಪಗಳ ಹಿನ್ನೆಲೆಯಲ್ಲಿ ಸರ್ಕಾರ ತಪಾಸಣೆ ಕಾರ್ಯಾಚರಣೆ ತೀವ್ರಗೊಳಿಸಿದೆ. ರಾಜ್ಯದಲ್ಲಿರುವ 5,946 ಪೆಟ್ರೋಲ್ ಬಂಕ್‌ಗಳ ಪೈಕಿ ಈವರೆಗೆ 805 ಬಂಕ್‌ಗಳನ್ನು ಪರಿಶೀಲಿಸಲಾಗಿದ್ದು, 768 ಕಡೆಗಳಲ್ಲಿ ತೂಕ–ಅಳತೆಗೆ ಸಂಬಂಧಿಸಿದ ಅಕ್ರಮಗಳು ಪತ್ತೆಯಾಗಿವೆ.

ಗ್ರಾಹಕರಿಗೆ ನಿಗದಿತ ಪ್ರಮಾಣದ ಇಂಧನ ದೊರೆಯುತ್ತಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ತೂಕ ಮತ್ತು ಅಳತೆ ಇಲಾಖೆ ಅಧಿಕಾರಿಗಳು ಬಂಕ್‌ಗಳಲ್ಲಿ ತಪಾಸಣೆ ನಡೆಸುತ್ತಿದ್ದಾರೆ. ಅಕ್ರಮ ಕಂಡುಬಂದಿರುವ ಬಂಕ್‌ಗಳ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಲು ಮುಂದಾಗಲಾಗಿದೆ. ಪೆಟ್ರೋಲ್ ಬಂಕ್‌ಗಳಲ್ಲಿ ವಂಚನೆ ಅಥವಾ ಅಕ್ರಮದ ಬಗ್ಗೆ ಗ್ರಾಹಕರು ದೂರು ಸಲ್ಲಿಸಲು 18005991100 ಸಹಾಯವಾಣಿ ಆರಂಭಿಸಲಾಗಿದೆ. ಈ ಸಂಖ್ಯೆಯನ್ನು ಬಂಕ್‌ಗಳ ಮುಂಭಾಗದಲ್ಲಿ ಸಾರ್ವಜನಿಕರಿಗೆ ಕಾಣುವಂತೆ ಪ್ರದರ್ಶಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ಅನುಮಾನಾಸ್ಪದ ವ್ಯವಹಾರ ಕಂಡುಬಂದರೆ ಗ್ರಾಹಕರು ಸಹಾಯವಾಣಿಗೆ ದೂರು ನೀಡಬಹುದು.

ಮುಂದಿನ ದಿನಗಳಲ್ಲೂ ಪೆಟ್ರೋಲ್ ಬಂಕ್‌ಗಳ ತಪಾಸಣೆ ಮುಂದುವರಿಯಲಿದ್ದು, ಗ್ರಾಹಕರಿಗೆ ನಿಗದಿತ ಪ್ರಮಾಣದ ಇಂಧನ ಸಿಗುವಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

# ಹರಿಪ್ರಸಾದ್ ಹೇಳಿಕೆ ದೇಶದ್ರೋಹದ ಕೆಲಸ: ವಿಜಯೇಂದ್ರ

● ವಿಕ್ರಮ ವಾಹಿನಿ । ಬೆಂಗಳೂರು


ಪ್ರಧಾನಿ ನರೇಂದ್ರ ಮೋದಿ ಅವರ 25 ವರ್ಷಗಳ ಸಾರ್ವಜನಿಕ ಸೇವೆಯನ್ನು ಸ್ಮರಿಸುವ ನಿಟ್ಟಿನಲ್ಲಿ ಬಿಜೆಪಿ ವತಿಯಿಂದ ಸೆ.17ರಿಂದ ಅ.17ರವರೆಗೆ 'ಸೇವಾ ಸಂಕಲ್ಪ ಅಭಿಯಾನ' ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದರು.

ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಬುಧವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಸೆ.17ರಂದು ಸಂಜೆ 7 ಗಂಟೆಗೆ ರಾಜ್ಯ ಸೇರಿದಂತೆ ದೇಶದಾದ್ಯಂತ ಐತಿಹಾಸಿಕ ಸ್ಥಳಗಳು, ಮನೆಗಳು ಹಾಗೂ ಪ್ರಧಾನಿ ಮೋದಿ ಅವರ ಅವಧಿಯಲ್ಲಿ ಕೈಗೊಂಡಿರುವ ಪ್ರಮುಖ ಅಭಿವೃದ್ಧಿ ಯೋಜನೆಗಳ ಸ್ಥಳಗಳಲ್ಲಿ ದೀಪ ಪ್ರಜ್ವಲನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ಶಿವಮೊಗ್ಗ ವಿಮಾನ ನಿಲ್ದಾಣ ಸೇರಿದಂತೆ ವಿವಿಧೆಡೆ ಕಾರ್ಯಕ್ರಮ ನಡೆಯಲಿದ್ದು, ಸಂಸದ ಬಿ.ವೈ. ರಾಘವೇಂದ್ರ ಹಾಗೂ ಸ್ಥಳೀಯ ಶಾಸಕರು ಪಾಲ್ಗೊಳ್ಳಲಿದ್ದಾರೆ ಎಂದರು.

ಮೋದಿ ಅವರಿಗೆ ಉತ್ತಮ ಆರೋಗ್ಯ ಮತ್ತು ದೀರ್ಘಾಯುಷ್ಯ ಕರುಣಿಸಲಿ ಎಂದು ದೀಪ ಪ್ರಜ್ವಲನೆ ಮೂಲಕ ಪ್ರಾರ್ಥಿಸಲಾಗುವುದು. ವಿಕಸಿತ ಭಾರತ ಸಂಕಲ್ಪ ಈಡೇರಿಸುವ ಉದ್ದೇಶದಿಂದ ವಿವಿಧ ಸೇವಾ ಚಟುವಟಿಕೆಗಳನ್ನು ಆಯೋಜಿಸಲಾಗುವುದು ಎಂದು ಹೇಳಿದರು. ಬಿಜೆಪಿ ಕಲೆ ಮತ್ತು ಸಾಂಸ್ಕೃತಿಕ ಪ್ರಕೋಷ್ಠದ ವತಿಯಿಂದ ವಿವಿಧ ರಾಜ್ಯಗಳ ಕಲಾವಿದರು ಮೋದಿ ಅವರ 25 ವರ್ಷಗಳ ಸಾರ್ವಜನಿಕ ಸೇವೆಯನ್ನು ಬಿಂಬಿಸುವ ಚಿತ್ರಕಲಾಕೃತಿಗಳನ್ನು ರಚಿಸಿರುವುದನ್ನು ವಿಜಯೇಂದ್ರ ಶ್ಲಾಘಿಸಿದರು.

**ಹರಿಪ್ರಸಾದ್ ಹೇಳಿಕೆಗೆ ಆಕ್ಷೇಪ**

ಕಾಂಗ್ರೆಸ್ ರಾಜ್ಯಾಧ್ಯಕ್ಷ ಬಿ.ಕೆ. ಹರಿಪ್ರಸಾದ್ ಅವರು ಉಮರ್ ಖಾಲಿದ್ ಅವರನ್ನು 'ರಾಷ್ಟ್ರವಾದಿ' ಎಂದು ಹೇಳಿರುವ ವಿಚಾರಕ್ಕೆ ವಿಜಯೇಂದ್ರ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಈ ಹೇಳಿಕೆ ದೇಶದ್ರೋಹದ ಕೆಲಸವಾಗಿದ್ದು, ಇಂತಹ ಹೇಳಿಕೆಗಳು ರಾಜ್ಯದಲ್ಲಿ ಅಸಮಾಧಾನ ಹಾಗೂ ಅಭದ್ರತೆಯ ವಾತಾವರಣಕ್ಕೆ ಕಾರಣವಾಗುತ್ತವೆ ಎಂದು ಆರೋಪಿಸಿದರು. ಹರಿಪ್ರಸಾದ್ ಅವರ ಹೇಳಿಕೆಗೆ ಬಿಜೆಪಿ ಹಾಗೂ ಎಬಿವಿಪಿ ಸೇರಿದಂತೆ ವಿವಿಧ ವಲಯಗಳಿಂದ ವಿರೋಧ ವ್ಯಕ್ತವಾಗಿದೆ.



ವಿಧಾನಸೌಧದಲ್ಲಿ 'ಪಾಕಿಸ್ತಾನ ಜಿಂದಾಬಾದ್' ಘೋಷಣೆ ಕೂಗಿದ ಪ್ರಕರಣದಲ್ಲಿ ಕಾಂಗ್ರೆಸ್ ಆರೋಪಿಗಳಿಗೆ ರಕ್ಷಣೆ ನೀಡಿತ್ತು ಎಂದು ವಿಜಯೇಂದ್ರ ಆರೋಪಿಸಿದರು. ಆಡಳಿತ ಪಕ್ಷದವರು ಕಾನೂನು ಮತ್ತು ಸುವ್ಯವಸ್ಥೆ ಹದಗೆಡಿಸುವ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದಾರೆ ಎಂದು ಟೀಕಿಸಿದರು.

**'ಕಾಂಗ್ರೆಸ್‌ನಲ್ಲಿ ಮೂರು ಬಾಗಿಲಿನ ಮನೆ'**

ಕಾಂಗ್ರೆಸ್ ಪಕ್ಷದೊಳಗಿನ ಭಿನ್ನಾಭಿಪ್ರಾಯಗಳನ್ನು ಉಲ್ಲೇಖಿಸಿದ ವಿಜಯೇಂದ್ರ, ಕಾಂಗ್ರೆಸ್ ಪರಿಸ್ಥಿತಿ 'ಒಂದು ಮನೆ, ಮೂರು ಬಾಗಿಲು' ಎಂಬಂತಾಗಿದೆ ಎಂದು ವ್ಯಂಗ್ಯವಾಡಿದರು. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಅಧಿಕಾರ ವಹಿಸಿಕೊಂಡು ಮೂರು ತಿಂಗಳಾಗಿದ್ದು, ಈ ಅವಧಿಯಲ್ಲಿ ಏನು ಸಾಧನೆ ಮಾಡಿದ್ದಾರೆ ಎಂದು ಪ್ರಶ್ನಿಸಿದರು.

**ಕೃಷಿ ಸಾಲ ಮನ್ನಾಕ್ಕೆ ಆಗ್ರಹ**

ರಾಜ್ಯದಲ್ಲಿನ ರೈತರ ಸಂಕಷ್ಟಕ್ಕೆ ಸರ್ಕಾರ ತಕ್ಷಣ ಸ್ಪಂದಿಸಬೇಕು. ಕೃಷಿ ಸಾಲ ಮನ್ನಾ ಮಾಡಬೇಕು ಹಾಗೂ ಬರಪೀಡಿತ ಪ್ರದೇಶಗಳಿಗೆ ಸಚಿವರು ಭೇಟಿ ನೀಡಿ ಪರಿಹಾರ ಕ್ರಮ ಕೈಗೊಳ್ಳಬೇಕು ಎಂದು ವಿಜಯೇಂದ್ರ ಆಗ್ರಹಿಸಿದರು. ಕಸ್ತೂರಿರಂಗನ್ ವರದಿ ಕುರಿತು ವಿಧಾನಮಂಡಲದಲ್ಲಿ ಸಮಗ್ರ ಚರ್ಚೆ ನಡೆಸಿ, ಅರಣ್ಯದಂಚಿನ ಜನರಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಬೇಕು ಎಂದರು.

**'ಹಿಂದೂಗಳ ಅಪಮಾನ, ಅಲ್ಪಸಂಖ್ಯಾತರ ತುಷ್ಟೀಕರಣ'**

ಕಾಂಗ್ರೆಸ್ ಸರ್ಕಾರ ಅಲ್ಪಸಂಖ್ಯಾತರ ಬೆಂಬಲದ ಮೇಲೆಯೇ ಅಧಿಕಾರಕ್ಕೆ ಬಂದಿರುವ ಭ್ರಮೆಯಲ್ಲಿದೆ ಎಂದು ವಿಜಯೇಂದ್ರ ಆರೋಪಿಸಿದರು. ಉಮರ್ ಖಾಲಿದ್ ಕುರಿತ ಕಾರ್ಯಕ್ರಮಕ್ಕೆ ಅವಕಾಶ ನೀಡುವ ವಿಚಾರದಲ್ಲಿಯೂ ಅವರು ಸರ್ಕಾರವನ್ನು ಟೀಕಿಸಿದರು. ಗಣೇಶ ಹಬ್ಬದ ಆಚರಣೆಗೆ ತೊಂದರೆ ನೀಡುವ ಮೂಲಕ ಹಿಂದೂಗಳ ಭಾವನೆಗಳಿಗೆ ಧಕ್ಕೆ ತಂದು, ಅಲ್ಪಸಂಖ್ಯಾತರ ತುಷ್ಟೀಕರಣಕ್ಕೆ ಸರ್ಕಾರ ಮುಂದಾಗಿದೆ ಎಂದು ಆರೋಪಿಸಿದ ಅವರು, ಈ ವಿಚಾರಗಳನ್ನು ಬಿಜೆಪಿ ವಿಧಾನಸಭೆ ಸೇರಿದಂತೆ ವಿವಿಧ ವೇದಿಕೆಗಳಲ್ಲಿ ಪ್ರಸ್ತಾಪಿಸಲಿದೆ ಎಂದರು.

# 50 ಲಕ್ಷ ಲಂಚ ಪಡೆಯುವಾಗ ತಹಸೀಲ್ದಾರ್ ಲೋಕಾಯುಕ್ತ ಬಲೆಗೆ

● ವಿಕ್ರಮ ವಾಹಿನಿ । ಧಾರವಾಡ

ಜಮೀನಿನ 'ಸಿ ಖರಾಬ್' ತೆರವುಗೊಳಿಸಿ ಅಭಿವೃದ್ಧಿಪಡಿಸಲು ಅನುಮತಿ ನೀಡುವ ಸಂಬಂಧ ಒಂದು ಕೋಟಿ ರೂ. ಲಂಚಕ್ಕೆ ಬೇಡಿಕೆಯಿಟ್ಟು, ಮುಂಗಡವಾಗಿ 50 ಲಕ್ಷ ರೂ. ಸ್ವೀಕರಿಸುತ್ತಿದ್ದ ಧಾರವಾಡ ತಹಸೀಲ್ದಾರ್ ಸಚ್ಚಿದಾನಂದ ಕುಚನೂರ್ ಅವರನ್ನು ಲೋಕಾಯುಕ್ತ ಅಧಿಕಾರಿಗಳು ಬುಧವಾರ ಬಲೆಗೆ ಬೀಳಿಸಿದ್ದಾರೆ.

ಧಾರವಾಡ ತಾಲೂಕಿನ ಯರಿಕೊಪ್ಪ ಸಮೀಪ ಡೆವಲಪರ್ ಮಂಜುನಾಥ ಅಂಗಡಿ ಅವರು ಜಮೀನು ಖರೀದಿಸಿದ್ದರು. ಜಮೀನಿನಲ್ಲಿದ್ದ 'ಸಿ ಖರಾಬ್' ತೆರವುಗೊಳಿಸಿ ಅಭಿವೃದ್ಧಿಪಡಿಸಲು ಮುಂದಾಗಿದ್ದರು. ಈ ಕಾರ್ಯಕ್ಕೆ ಸಂಬಂಧಿಸಿದಂತೆ ತಹಸೀಲ್ದಾರ್ ಸಚ್ಚಿದಾನಂದ ಕುಚನೂರ್ ಅವರು ಮಂಜುನಾಥ ಅಂಗಡಿ ಅವರಿಂದ ಒಂದು ಕೋಟಿ ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎನ್ನಲಾಗಿದೆ.

ಒಪ್ಪಂದದಂತೆ ಮುಂಗಡವಾಗಿ 50 ಲಕ್ಷ ರೂ. ನೀಡಲು ಮುಂದಾದ ವೇಳೆ ಲೋಕಾಯುಕ್ತ ಅಧಿಕಾರಿಗಳು ಕಾರ್ಯಾಚರಣೆ ನಡೆಸಿದ್ದಾರೆ. ಲಂಚದ ಹಣ ಸ್ವೀಕರಿಸುತ್ತಿದ್ದ ಸಂದರ್ಭದಲ್ಲಿ ತಹಸೀಲ್ದಾರ್ ಅವರನ್ನು ಸ್ಥಳದಲ್ಲೇ ವಶಕ್ಕೆ ಪಡೆಯಲಾಗಿದೆ ಎಂದು ತಿಳಿದುಬಂದಿದೆ.

ದೂರು ಆಧರಿಸಿ ಖಚಿತ ಮಾಹಿತಿ ಸಂಗ್ರಹಿಸಿದ್ದ ಲೋಕಾಯುಕ್ತ ಅಧಿಕಾರಿಗಳು, ಲೋಕಾಯುಕ್ತ ಎಸ್‌ಪಿ ಸಿದ್ದಲಿಂಗಪ್ಪ ಅವರ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಿದ್ದಾರೆ. ಕಾರ್ಯಾಚರಣೆಯಲ್ಲಿ ಅಧಿಕಾರಿಗಳು ಲಂಚದ ಹಣವನ್ನು ವಶಪಡಿಸಿಕೊಂಡು, ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದ್ದಾರೆ.

ಕಾರ್ಯಾಚರಣೆಯ ವೇಳೆ ತಹಸೀಲ್ದಾರ್ ಕಚೇರಿಯಲ್ಲಿನ ಕೆಲ ದಾಖಲೆಗಳು ಹಾಗೂ ಸಂಬಂಧಿತ ಕಡತಗಳ ಬಗ್ಗೆಯೂ ಅಧಿಕಾರಿಗಳು ಪರಿಶೀಲನೆ ನಡೆಸಿದ್ದಾರೆ. ಜಮೀನಿನ 'ಸಿ ಖರಾಬ್' ತೆರವು ಪ್ರಕ್ರಿಯೆಗೆ ಸಂಬಂಧಿಸಿದ ದಾಖಲೆಗಳು ಮತ್ತು ಅಧಿಕಾರಿಗಳೊಂದಿಗೆ ನಡೆದ ವ್ಯವಹಾರಗಳ ಕುರಿತು ಮಾಹಿತಿ ಕಲೆಹಾಕಲಾಗುತ್ತಿದೆ.

ಲಂಚದ ಹಣದ ಮೂಲ, ಬೇಡಿಕೆ ಇಟ್ಟಿದ್ದ ರೀತಿಯ ಬಗ್ಗೆ ಹಾಗೂ ಪ್ರಕರಣದಲ್ಲಿ ಬೇರೆ ಯಾರಾದರೂ ಭಾಗಿಯಾಗಿದ್ದಾರೆಯೇ ಎಂಬುದರ ಕುರಿತು ಲೋಕಾಯುಕ್ತ ಅಧಿಕಾರಿಗಳು ತನಿಖೆ ಮುಂದುವರಿಸಿದ್ದಾರೆ. ಪ್ರಕರಣದ ತನಿಖೆ ಪೂರ್ಣಗೊಂಡ ಬಳಿಕ ಹೆಚ್ಚಿನ ವಿವರಗಳು ಹೊರಬೀಳುವ ಸಾಧ್ಯತೆಯಿದೆ.

ಘಟನೆಗೆ ಸಂಬಂಧಿಸಿದಂತೆ ತಹಸೀಲ್ದಾರ್ ವಿರುದ್ಧ ಲೋಕಾಯುಕ್ತ ಅಧಿಕಾರಿಗಳು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ. ಲಂಚದ ಬೇಡಿಕೆ ಹಾಗೂ ಹಣ ಸ್ವೀಕರಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಿಚಾರಣೆ ನಡೆಸಲಾಗುತ್ತಿದೆ.

# ಕೆಪಿಎಸ್‌ಸಿಗೆ ಕಾಯಕಲ್ಪ ನೀಡಲು ಕಾಂಗ್ರೆಸ್ ಮುಖಂಡರ ಮನವಿ

● ವಿಕ್ರಮ ವಾಹಿನಿ । ಬೆಂಗಳೂರು

ರಾಜ್ಯ ಲೋಕಸೇವಾ ಆಯೋಗ (ಕೆಪಿಎಸ್‌ಸಿ)ದಲ್ಲಿ ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ)ದ ನಿಯಮಾವಳಿ ಹಾಗೂ ಪ್ರಕ್ರಿಯೆಗಳನ್ನು ಅಳವಡಿಸುವ ಮೂಲಕ ಆಯೋಗಕ್ಕೆ ಸಮಗ್ರ ಕಾಯಕಲ್ಪ ನೀಡಬೇಕು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಕಾಂಗ್ರೆಸ್ ಮುಖಂಡರ ನಿಯೋಗ ಮನವಿ ಮಾಡಿದೆ.

ಕೆಪಿಸಿಸಿ ಕಚೇರಿಯಲ್ಲಿ ಮುಖ್ಯಮಂತ್ರಿಯನ್ನು ಭೇಟಿಯಾದ ನಿಯೋಗ, ಪಿ.ಸಿ. ಹೋಟಾ ಸಮಿತಿಯ ಶಿಫಾರಸುಗಳನ್ನು ಜಾರಿಗೊಳಿಸುವಂತೆಯೂ ಮನವಿ ಮಾಡಿತು. ಕೆಪಿಎಸ್‌ಸಿಯ ಇತ್ತೀಚಿನ ಬೆಳವಣಿಗೆಗಳಿಂದ ಉದ್ಯೋಗಾಕಾಂಕ್ಷಿಗಳು ಹಾಗೂ ಸಾರ್ವಜನಿಕರಲ್ಲಿ ಆಯೋಗದ ಮೇಲಿನ ವಿಶ್ವಾಸಕ್ಕೆ ಧಕ್ಕೆಯಾಗಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ ತಕ್ಷಣ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಕೋರಿದೆ.

**ತಪ್ಪಿತಸ್ಥರ ವಿರುದ್ಧ ಕ್ರಮ:** ಕೆಪಿಎಸ್‌ಸಿ ಅಧ್ಯಕ್ಷರು, ಸದಸ್ಯರು ಹಾಗೂ ಪರೀಕ್ಷಾ ನಿಯಂತ್ರಕರ ವಿರುದ್ಧದ ಆರೋಪಗಳ ಕುರಿತು ಸಂವಿಧಾನದ ಅನುಚ್ಛೇದ 317ರ ಅಡಿಯಲ್ಲಿ ತನಿಖೆ ನಡೆಸಲು ಕ್ರಮ ಕೈಗೊಳ್ಳಬೇಕು. ತನಿಖೆ ನಡೆಯುವ ಅವಧಿಯಲ್ಲಿ ಆರೋಪ ಎದುರಿಸುತ್ತಿರುವವರನ್ನು ಅಮಾನತುಗೊಳಿಸುವುದು ಸೇರಿದಂತೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ನಿಯೋಗ ಒತ್ತಾಯಿಸಿದೆ.

**ನೇಮಕಾತಿ ರದ್ದುಪಡಿಸಲು ಆಗ್ರಹ:** ಆಯೋಗದಲ್ಲಿ ನಡೆದಿರುವ ಅಕ್ರಮಗಳ ಕುರಿತು ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥರೆಂದು ಸಾಬೀತಾದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಅಕ್ರಮ ನಡೆದಿರುವುದಾಗಿ ಆರೋಪಿಸಲಾಗಿರುವ ಇತ್ತೀಚಿನ ನೇಮಕಾತಿ ಪ್ರಕ್ರಿಯೆಗಳನ್ನು ಪರಿಶೀಲಿಸಿ, ಅಗತ್ಯವಿದ್ದಲ್ಲಿ ರದ್ದುಗೊಳಿಸಬೇಕು ಎಂದು ಮನವಿಯಲ್ಲಿ ತಿಳಿಸಲಾಗಿದೆ.

**ಪಾರದರ್ಶಕತೆಗೆ ಒತ್ತು:** ಆಯೋಗದ ನೇಮಕಾತಿ ಪ್ರಕ್ರಿಯೆ ಮುಂದುವರಿಸಲು ನಿಷ್ಠಾವಂತ, ಪ್ರಾಮಾಣಿಕ ಹಾಗೂ ದಕ್ಷರನ್ನು ಒಳಗೊಂಡ ಸಣ್ಣ ಸಮಿತಿ ರಚಿಸಬೇಕು. ಅಧ್ಯಕ್ಷರು ಮತ್ತು ಸದಸ್ಯರ ನೇಮಕಾತಿಗಾಗಿ ಶೋಧನಾ ಸಮಿತಿ ರಚಿಸಿ, ಅದರ ಶಿಫಾರಸಿನ ಆಧಾರದ ಮೇಲೆ ನೇಮಕ ಮಾಡುವ ವ್ಯವಸ್ಥೆ ಜಾರಿಗೆ ತರಬೇಕು ಎಂದು ಮುಖಂಡರು ಸಲಹೆ ನೀಡಿದ್ದಾರೆ.

**ಸಂದರ್ಶನಕ್ಕೆ ಸಿಸಿಟಿವಿ:** ಕೆಪಿಎಸ್‌ಸಿ ನಡೆಸುವ ಸಂದರ್ಶನಗಳನ್ನು ಸಿಸಿಟಿವಿ ಕಣ್ಗಾವಲಿನಲ್ಲಿ ನಡೆಸಿ, ಅದರ ದಾಖಲೆಗಳನ್ನು ಕನಿಷ್ಠ ಮೂರು ವರ್ಷ ಸಂಗ್ರಹಿಸಿಡುವಂತೆ ಕಾನೂನು ರೂಪಿಸಬೇಕು.

ಅಧ್ಯಕ್ಷರು ಹಾಗೂ ಸದಸ್ಯರು ಪ್ರತಿ ವರ್ಷ ತಮ್ಮ ಮತ್ತು ಕುಟುಂಬ ಸದಸ್ಯರ ಚರ–ಸ್ಥಿರಾಸ್ತಿಗಳ ವಿವರಗಳನ್ನು ಲೋಕಾಯುಕ್ತ ಸಂಸ್ಥೆಗೆ ಸಲ್ಲಿಸುವ ವ್ಯವಸ್ಥೆ ಜಾರಿಗೆ ತರಬೇಕು ಎಂದು ಮನವಿ ಮಾಡಲಾಗಿದೆ.

**ನಿಯೋಗದಲ್ಲಿ ಪ್ರಮುಖರು:** ನಿಯೋಗದಲ್ಲಿ ಮಾಜಿ ಸಂಸದರಾದ ಉಗ್ರಪ್ಪ, ಬಿ.ಎಲ್. ಶಂಕರ್, ಎಲ್. ಹನುಮಂತಯ್ಯ, ಚಂದ್ರಪ್ಪ, ಮುದ್ದಹನುಮೇಗೌಡ, ಮಾಜಿ ಸಚಿವರಾದ ಪಿ.ಜಿ.ಆರ್. ಸಿಂಧ್ಯ, ಎಚ್.ಎಂ. ರೇವಣ್ಣ, ರಾಣಿ ಸತೀಶ್, ಮಾಜಿ ಸಭಾಪತಿ ವಿ.ಆರ್. ಸುದರ್ಶನ್, ಮಾಜಿ ಶಾಸಕರಾದ ಪಿ.ಆರ್. ರಮೇಶ್, ಕೊಂಡಜ್ಜಿ ಮೋಹನ್ ಹಾಗೂ ಹಿರಿಯ ಸಾಹಿತಿ ಸಿ.ಎಸ್. ದ್ವಾರಕನಾಥ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# 'ಸಂಪುಟದಲ್ಲಿ ಮಹಿಳಾ ಮಂತ್ರಿ ಇಲ್ಲದಿರುವುದು ನನ್ನ ತಪ್ಪು'

● ವಿಕ್ರಮ ವಾಹಿನಿ । ಬೆಂಗಳೂರು

ರಾಜ್ಯ ಸಚಿವ ಸಂಪುಟದಲ್ಲಿ ಮಹಿಳಾ ಮಂತ್ರಿ ಇಲ್ಲದಿರುವುದು ತಮ್ಮ ತಪ್ಪು ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಹೇಳಿದ್ದಾರೆ.

ಬೆಂಗಳೂರಿನಲ್ಲಿ ಮಾತನಾಡಿದ ಅವರು, ಮಹಿಳಾ ಸಚಿವ ಸ್ಥಾನಕ್ಕೆ ಒಬ್ಬರಿಗಿಂತ ಹೆಚ್ಚು ಆಕಾಂಕ್ಷಿಗಳಿದ್ದ ಹಿನ್ನೆಲೆಯಲ್ಲಿ ಅಭ್ಯರ್ಥಿಯನ್ನು ಅಂತಿಮಗೊಳಿಸಲು ಸಾಧ್ಯವಾಗಲಿಲ್ಲ. ಇದು ದೆಹಲಿಯ ಹೈಕಮಾಂಡ್‌ನ ತಪ್ಪಲ್ಲ, ತಮ್ಮದೇ ತಪ್ಪು. ಶೀಘ್ರದಲ್ಲೇ ಮಹಿಳೆಗೆ ಸಚಿವ ಸ್ಥಾನ ನೀಡುವ ಕುರಿತು ನಿರ್ಧಾರ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

**ಮಹಿಳಾ ಸಬಲೀಕರಣಕ್ಕೆ ಆದ್ಯತೆ**

ಮಹಿಳಾ ಸಬಲೀಕರಣದ ವಿಚಾರದಲ್ಲಿ ಕಾಂಗ್ರೆಸ್ ಸರ್ಕಾರ ಅತ್ಯಂತ ಗಂಭೀರವಾಗಿದೆ ಎಂದ ಸುರ್ಜೇವಾಲಾ, ಮೈತ್ರಿ ಸರ್ಕಾರದ ಅವಧಿಯಲ್ಲಿ ಎಚ್.ಡಿ. ಕುಮಾರಸ್ವಾಮಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರಾಗಿದ್ದರು. ಹೀಗಾಗಿ ಈ ವಿಚಾರದಲ್ಲಿ ಕುಮಾರಸ್ವಾಮಿ ಮಾತನಾಡುವ ಹಕ್ಕಿಲ್ಲ ಎಂದು ಟೀಕಿಸಿದರು.



**ಯುಪಿಐ ಶುಲ್ಕಕ್ಕೆ ಆಕ್ಷೇಪ**

ಯುಪಿಐ ವಹಿವಾಟುಗಳಿಗೆ ಶುಲ್ಕ ವಿಧಿಸುವ ಕೇಂದ್ರ ಸರ್ಕಾರದ ಕ್ರಮವನ್ನೂ ಸುರ್ಜೇವಾಲಾ ಟೀಕಿಸಿದರು. ಇದರಿಂದ ಬಡವರು ಮತ್ತು ಮಧ್ಯಮ ವರ್ಗದ ಜನರ ಮೇಲೂ ಹೊರೆ ಬೀಳಲಿದೆ ಎಂದು ಆರೋಪಿಸಿದರು.

ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ (ಎನ್‌ಪಿಸಿಐ) ಮೂಲಕ ಶೇ.0.4ರಷ್ಟು ಶುಲ್ಕ ವಿಧಿಸುವ ಕ್ರಮ ಮುಂದಿನ ದಿನಗಳಲ್ಲಿ ಎಲ್ಲ ಯುಪಿಐ ವಹಿವಾಟುಗಳಿಗೂ ವಿಸ್ತರಿಸುವ ಆತಂಕವಿದೆ ಎಂದು ಹೇಳಿದರು. ಕೇಂದ್ರ ಸರ್ಕಾರ ಯುಪಿಐ ವ್ಯವಸ್ಥೆಯನ್ನು 'ಕಲೆಕ್ಷನ್ ಮಷಿನ್' ಆಗಿ ಪರಿವರ್ತಿಸುತ್ತಿದೆ ಎಂದು ವಾಗ್ದಾಳಿ ನಡೆಸಿದರು.

**'ವಂದೇ ಮಾತರಂ'ಗೆ ಗೌರವ**

ರಾಜ್ಯದಲ್ಲಿ 'ವಂದೇ ಮಾತರಂ' ಗೀತೆಯ ಎರಡು ಚರಣಗಳನ್ನು ಮಾತ್ರ ಹಾಡುವಂತೆ ನೀಡಿರುವ ಆದೇಶದ ಕುರಿತು ಪ್ರತಿಕ್ರಿಯಿಸಿದ ಅವರು, ಕೇಂದ್ರದ ಮಾರ್ಗಸೂಚಿಗಳಿಗೆ ಅನುಗುಣವಾಗಿ ರಾಜ್ಯ ಸರ್ಕಾರ ನಿರ್ಧಾರ ಕೈಗೊಂಡಿದೆ ಎಂದರು.

ಸರ್ಕಾರ 'ವಂದೇ ಮಾತರಂ'ಗೆ ಗೌರವ ನೀಡುವ ಕೆಲಸ ಮಾಡಿದೆ. ರಾಷ್ಟ್ರಪತಿ, ರಾಜ್ಯಪಾಲರು ಹಾಗೂ ಪ್ರಧಾನಿ ಭಾಗವಹಿಸುವ ಕಾರ್ಯಕ್ರಮಗಳಲ್ಲಿ ಪೂರ್ಣ ಗೀತೆಯನ್ನು ಹಾಡಲಾಗುತ್ತದೆ. 'ವಂದೇ ಮಾತರಂ' ಹಾಡುವುದಿಲ್ಲ ಎಂದು ಸರ್ಕಾರ ಎಲ್ಲಿಯೂ ಹೇಳಿಲ್ಲ ಎಂದು ಸ್ಪಷ್ಟಪಡಿಸಿದರು.

ಮಹಿಳಾ ಸಚಿವರ ನೇಮಕ ಕುರಿತು ಶೀಘ್ರದಲ್ಲೇ ತೀರ್ಮಾನ ಕೈಗೊಳ್ಳಲಾಗುವುದು ಎಂದು ಸುರ್ಜೇವಾಲಾ ಪುನರುಚ್ಚರಿಸಿದರು.

ಯುಪಿಐ ಶುಲ್ಕ ಹಾಗೂ 'ವಂದೇ ಮಾತರಂ' ವಿಚಾರದಲ್ಲೂ ಕೇಂದ್ರದ ನಿಲುವನ್ನು ಅವರು ಟೀಕಿಸಿದರು.

# ಸತೀಶ್ ಜಾರಕಿಹೊಳಿ ವಿರುದ್ಧ ಹೊಸ ಪ್ರಕರಣಕ್ಕೆ ಇಡಿ ಸಿದ್ಧತೆ

● ವಿಕ್ರಮ ವಾಹಿನಿ । ಬೆಂಗಳೂರು

ರಾಜ್ಯ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರಿಗೆ ಸಂಬಂಧಿಸಿದ ಸ್ಥಳಗಳ ಮೇಲೆ ನಡೆಸಿದ ಶೋಧ ಕಾರ್ಯಾಚರಣೆಯ ಮುಂದುವರಿದ ಭಾಗವಾಗಿ ಜಾರಿ ನಿರ್ದೇಶನಾಲಯ (ಇಡಿ) ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿ ಹೊಸ ಪ್ರಕರಣ ದಾಖಲಿಸುವ ಸಾಧ್ಯತೆ ಕುರಿತು ಪರಿಶೀಲನೆ ನಡೆಸುತ್ತಿದೆ ಎಂದು ಮೂಲಗಳು ತಿಳಿಸಿವೆ.

ಸೆ.9 ಮತ್ತು 10ರಂದು ಬೆಂಗಳೂರು, ಬೆಳಗಾವಿ, ಗೋಕಾಕ್ ಹಾಗೂ ಕೋಲ್ಕತ್ತಾದಲ್ಲಿ ಸತೀಶ್ ಜಾರಕಿಹೊಳಿ, ಅವರ ಕುಟುಂಬಸ್ಥರು ಹಾಗೂ ಆಪ್ತರಿಗೆ ಸಂಬಂಧಿಸಿದ 21 ಸ್ಥಳಗಳಲ್ಲಿ ಇಡಿ ಶೋಧ ನಡೆಸಿತ್ತು. ಈ ವೇಳೆ ರೂ 3.3 ಕೋಟಿ ನಗದು, ಸುಮಾರು ರೂ 15 ಲಕ್ಷ ಮೌಲ್ಯದ ವಿದೇಶಿ ಕರೆನ್ಸಿ ಹಾಗೂ ವಿದೇಶಿ ಹೂಡಿಕೆಗಳಿಗೆ ಸಂಬಂಧಿಸಿದ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಇಡಿ ಪ್ರಕಟಿಸಿತ್ತು.

ಇದುವರೆಗೆ ತನಿಖೆ ಮುಖ್ಯವಾಗಿ ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಫೆಮಾ) ವ್ಯಾಪ್ತಿಯಲ್ಲಿನ ಅಘೋಷಿತ ವಿದೇಶಿ ಹೂಡಿಕೆಗಳು, ಗಡಿಯಾಚೆಗಿನ ವಹಿವಾಟುಗಳು ಹಾಗೂ ಹಣಕಾಸು ವ್ಯವಹಾರಗಳ ಪರಿಶೀಲನೆಗೆ ಸಂಬಂಧಿಸಿದೆ ಎಂದು ಇಡಿ ತಿಳಿಸಿದೆ.

ಶೋಧದ ವೇಳೆ ದೊರೆತ ದಾಖಲೆಗಳು ಮತ್ತು ಹಣಕಾಸು ವಹಿವಾಟಿನ ವಿವರಗಳ ಆಧಾರದ ಮೇಲೆ ಹಣದ ಮೂಲ, ವರ್ಗಾವಣೆ ಹಾಗೂ ಅಂತಿಮ ಬಳಕೆಯ ಕುರಿತು ತನಿಖೆ ವಿಸ್ತರಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಆಫ್ರಿಕಾ ಹೂಡಿಕೆಗಳ ಮೇಲೂ ನಿಗಾ

ಗುತ್ತಿಗೆದಾರರಿಂದ ಸಂಗ್ರಹಿಸಲಾಗಿದೆ ಎನ್ನಲಾದ ಹಣವನ್ನು ವಿದೇಶಿ ಆಸ್ತಿಗಳು ಹಾಗೂ ಆಫ್ರಿಕಾದ ಗಣಿಗಾರಿಕೆ ಉದ್ಯಮಗಳಲ್ಲಿ ಹೂಡಿಕೆ ಮಾಡಲಾಗಿದೆ ಎಂಬ ಆರೋಪಗಳ ಬಗ್ಗೆಯೂ ಇಡಿ ಪರಿಶೀಲನೆ ನಡೆಸುತ್ತಿದೆ ಎಂದು ವರದಿಯಾಗಿದೆ.


ಕಾಂಗೋದ ಮ್ಯಾಗ್ನಿಟ್ಯೂಡ್ ಸ್ಟಾರ್ ಎಸ್.ಎ.ಆರ್.ಎಲ್., ಎಲ್ಡೋರಾಡೋ ಮೈನಿಂಗ್ ರಿಸೋರ್ಸಸ್ ಹಾಗೂ ಜಾಂಬಿಯಾದ ನವ ಅರುಮ್ ಮೈನಿಂಗ್ ಸೇರಿದಂತೆ ಕೆಲವು ವಿದೇಶಿ ಸಂಸ್ಥೆಗಳಿಗೆ ಸಂಬಂಧಿಸಿದ ದಾಖಲೆಗಳು ತನಿಖಾಧಿಕಾರಿಗಳ ಗಮನಕ್ಕೆ ಬಂದಿವೆ ಎಂದು ತಿಳಿದುಬಂದಿದೆ. ಈ ಸಂಬಂಧ ಅಂತಿಮ ನಿರ್ಣಯ ತನಿಖೆ ಹಾಗೂ ಕಾನೂನು ಪ್ರಕ್ರಿಯೆಯ ಬಳಿಕವೇ ಹೊರಬೀಳಲಿದೆ.

ಶೋಧದ ವೇಳೆ ವಶಪಡಿಸಿಕೊಂಡಿರುವ ಹಣ ತಮ್ಮ ಕುಟುಂಬಕ್ಕೆ ಸೇರಿದ್ದಾಗಿದೆ ಎಂದು ಸತೀಶ್ ಜಾರಕಿಹೊಳಿ ಹೇಳಿದ್ದು, ಹಣದ ಮೂಲವನ್ನು ಸೂಕ್ತ ದಾಖಲೆಗಳ ಮೂಲಕ ವಿವರಿಸುವುದಾಗಿ ತಿಳಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ವಶಪಡಿಸಿಕೊಂಡ ನಗದು ಮತ್ತು ವಿದೇಶಿ ಕರೆನ್ಸಿಯ ಮಾಲೀಕತ್ವ, ಹಣದ ಮೂಲ ಹಾಗೂ ಅದಕ್ಕೆ ಸಂಬಂಧಿಸಿದ ದಾಖಲೆಗಳ ಹೊಂದಾಣಿಕೆಯನ್ನು ಅಧಿಕಾರಿಗಳು ಪರಿಶೀಲಿಸುತ್ತಿದ್ದಾರೆ.


ರಾಜಕೀಯ ಆರೋಪ–ಪ್ರತ್ಯಾರೋಪ

ಸತೀಶ್ ಜಾರಕಿಹೊಳಿ ವಿರುದ್ಧದ ಇಡಿ ಕ್ರಮ ರಾಜಕೀಯ ವಲಯದಲ್ಲೂ ಚರ್ಚೆಗೆ ಕಾರಣವಾಗಿದೆ. ಕಾಂಗ್ರೆಸ್ ನಾಯಕರು ಕೇಂದ್ರ ತನಿಖಾ ಸಂಸ್ಥೆಗಳ ಕ್ರಮವನ್ನು ರಾಜಕೀಯ ಉದ್ದೇಶಿತ ಎಂದು ಟೀಕಿಸಿದ್ದಾರೆ. ಮತ್ತೊಂದೆಡೆ, ಇಡಿ ತನ್ನ ಕ್ರಮವು ಫೆಮಾ ಉಲ್ಲಂಘನೆ, ವಿದೇಶಿ ಹೂಡಿಕೆ ಮತ್ತು ಹಣಕಾಸು ವ್ಯವಹಾರಗಳ ತನಿಖೆಯ ಭಾಗವಾಗಿದೆ ಎಂದು ಹೇಳಿದೆ.



ಮುಂದಿನ ಹಂತದಲ್ಲಿ ವಶಪಡಿಸಿಕೊಂಡ ದಾಖಲೆಗಳ ಪರಿಶೀಲನೆ, ಹಣಕಾಸು ವಹಿವಾಟಿನ ಜಾಡು ಹಾಗೂ ಸಂಬಂಧಪಟ್ಟವರ ಹೇಳಿಕೆಗಳ ಆಧಾರದ ಮೇಲೆ ಪ್ರಕರಣದ ಮುಂದಿನ ದಿಕ್ಕು ನಿರ್ಧಾರವಾಗುವ ಸಾಧ್ಯತೆಯಿದೆ.

# ಹಿರಿಯ ನಟ ಅನಂತ್ ನಾಗ್ ಅವರಿಗೆ ದಾದಾ ಸಾಹೇಬ್ ಸಮ್ಮಾನ; ಡಿ.ಕೆ. ಶಿವಕುಮಾರ್‌ರಿಂದ ಅಭಿನಂದನೆ



● ವಿಕ್ರಮ ವಾಹಿನಿ । ಬೆಂಗಳೂರು

"ಕನ್ನಡ ಚಿತ್ರರಂಗದ ಹಿರಿಯ ನಟ, ಅಪ್ರತಿಮ ಕಲಾವಿದರು ಹಾಗೂ ಬಹುಮುಖ ಪ್ರತಿಭೆಯ ಅನಂತ್ ನಾಗ್ ಅವರಿಗೆ ಭಾರತೀಯ ಸಿನಿಮಾ ರಂಗದ ಅತ್ಯುನ್ನತ ಗೌರವಗಳಲ್ಲಿ ಒಂದಾದ 2024ನೇ ಸಾಲಿನ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ದೊರೆತಿರುವುದು ಕನ್ನಡಿಗರೆಲ್ಲರಿಗೂ ಹೆಮ್ಮೆಯ ಸಂಗತಿ" ಎಂದು ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಸಂತಸ ವ್ಯಕ್ತಪಡಿಸಿದ್ದಾರೆ.

"ಕನ್ನಡ, ಹಿಂದಿ ಸೇರಿದಂತೆ ಹಲವು ಭಾಷೆಗಳಲ್ಲಿ ನಟಿಸಿರುವ ಅನಂತ್ ನಾಗ್ ಅವರ ಕಲಾಸೇವೆ ಅಪಾರ. ಭಾರತೀಯ ಸಿನಿರಂಗಕ್ಕೆ ಇವರ ಕೊಡುಗೆಗಳನ್ನು ಗುರುತಿಸಿ ಭಾರತ ಸರ್ಕಾರ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಘೋಷಿಸಿ ಅಭಿಜಾತ ಕಲಾವಿದರನ್ನು ಗೌರವಿಸಿದೆ.

ಅನಂತ್ ನಾಗ್ ಅವರಿಗೆ ನಾಡಿನ ಜನತೆಯ ಪರವಾಗಿ ಹೃದಯಪೂರ್ವಕ ಅಭಿನಂದನೆಗಳು. ಅವರ ನಟನೆ, ಕಲಾ ಪಯಣ ಮುಂದಿನ ಪೀಳಿಗೆಗಳಿಗೂ ಸ್ಫೂರ್ತಿಯಾಗಲಿ" ಎಂದು ಸಿಎಂ ಹಾರೈಸಿದ್ದಾರೆ.

# ಮಹಿಳೆ ಮನೆಗೆ ಬೆಂಕಿ: ಕಾನ್‌ಸ್ಟೇಬಲ್ ವಿರುದ್ಧ ಎರಡು ಎಫ್‌ಐಆರ್

● ವಿಕ್ರಮ ವಾಹಿನಿ । ಕಲಬುರಗಿ

ಮಹಿಳೆಯೊಬ್ಬರ ಮೇಲೆ ಹಲ್ಲೆ ನಡೆಸಿ, ಆಕೆಯ ಮನೆಗೆ ಬೆಂಕಿ ಹಚ್ಚಿದ ಆರೋಪದ ಬೆನ್ನಲ್ಲೇ, ತನ್ನ ವಿರುದ್ಧ ಎಫ್‌ಐಆರ್ ದಾಖಲಿಸಿದ ಪಿಎಸ್‌ಐ ಅವರ ಖಾಸಗಿ ಕಾರಿಗೂ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ ಆರೋಪ ಪೊಲೀಸ್ ಕಾನ್‌ಸ್ಟೇಬಲ್ ವಿರುದ್ಧ ಕೇಳಿಬಂದಿದೆ. ಕಲಬುರಗಿ ಜಿಲ್ಲೆಯ ಕಮಲಾಪುರ ತಾಲೂಕಿನ ಮಹಾಗಾಂವ್ ಗ್ರಾಮದಲ್ಲಿ ಘಟನೆ ನಡೆದಿದೆ.

ಚಿಂಚೋಳಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾನ್‌ಸ್ಟೇಬಲ್ ರಾಜಶೇಖರ್ ವರನಾಳ್ ವಿರುದ್ಧ ಪ್ರಕರಣ ದಾಖಲಾಗಿದೆ. ಮಹಾಗಾಂವ್ ನಿವಾಸಿ ರೇಷ್ಮಾ ಎಂಬುವರೊಂದಿಗೆ ಈ ಹಿಂದೆ ಪರಿಚಯ ಹೊಂದಿದ್ದ ರಾಜಶೇಖರ್, ಬಳಿಕ ಇಬ್ಬರ ನಡುವೆ ಗಲಾಟೆ ನಡೆಯುತ್ತಿದ್ದ ಹಿನ್ನೆಲೆಯಲ್ಲಿ ಚಿಂಚೋಳಿಗೆ ವರ್ಗಾವಣೆಯಾಗಿದ್ದರು ಎನ್ನಲಾಗಿದೆ.

ರಾಜಶೇಖರ್ ತಮ್ಮ ಮನೆಗೆ ನುಗ್ಗಿ ಹಲ್ಲೆ ನಡೆಸಿ, ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದಾರೆ ಎಂದು ರೇಷ್ಮಾ ಮಹಾಗಾಂವ್ ಠಾಣೆಗೆ ದೂರು ನೀಡಿದ್ದರು. ಈ ದೂರಿನ ಆಧಾರದಲ್ಲಿ ಪಿಎಸ್‌ಐ ಬಸವರಾಜ್ ಅವರು ರಾಜಶೇಖರ್ ವಿರುದ್ಧ ಎಫ್‌ಐಆರ್ ದಾಖಲಿಸಿದ್ದರು.

ಘಟನೆ ಕುರಿತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವರದಿ ಕೇಳಿದ್ದು, ಪ್ರಕರಣದ ತನಿಖೆ ನಡೆಯುತ್ತಿದೆ. ಈ ಕುರಿತು ಪ್ರತಿಕ್ರಿಯಿಸಿರುವ ಗೃಹ ಸಚಿವ ಪ್ರಿಯಾಂಕ್ ಖರ್ಗೆ, ಸಾರ್ವಜನಿಕರ ಮೇಲೆ ದೌರ್ಜನ್ಯ ಎಸಗಿದರೆ ಕಾನ್‌ಸ್ಟೇಬಲ್‌ನಿಂದ ಐಪಿಎಸ್ ಅಧಿಕಾರಿವರೆಗೆ ಯಾರೇ ತಪ್ಪು ಮಾಡಿದರೂ ಕಾನೂನು ಪ್ರಕಾರ ಮುಲಾಜಿಲ್ಲದೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

# 'ಬಿಜೆಪಿ ಕಾಲದಲ್ಲಿ ಬಡವರು ಬದುಕುವುದೇ ಕಷ್ಟವಾಗುತ್ತದೆ'

● ವಿಕ್ರಮ ವಾಹಿನಿ । ಬೀದರ್

ರೂ.20000ಕ್ಕಿಂತ ಹೆಚ್ಚು ನಗದು ವಹಿವಾಟಿಗೆ ದಂಡ, 2 ಸಾವಿರ ಮೇಲ್ಪಟ್ಟ ಯುಪಿಐಗೆ ಶುಲ್ಕ ಹಾಕಿರುವ ಕೇಂದ್ರ ಸರ್ಕಾರ ರಾಷ್ಟ್ರದ ಆರ್ಥಿಕತೆಯನ್ನು ಜರ್ಝರಿತಗೊಳಿಸಲಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ ಅಭಿಪ್ರಾಯಪಟ್ಟಿದ್ದಾರೆ.

ಬೀದರ್ ಜಿಲ್ಲೆ ಇಂಚೂರಿನಲ್ಲಿ ಚನ್ನಬಸವಪಟ್ಟದ್ದೇವರು ವೃಕ್ಷೋದ್ಯಾನ ಉದ್ಘಾಟನೆ ವೇಳೆ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ಯುಪಿಐ ಮೇಲಿನ ಎಂಡಿಆರ್ ವ್ಯಾಪಾರಿಗಳಿಗೇ ಹೊರತು ಗ್ರಾಹಕರಿಗಲ್ಲ ಎಂದು ಕೇಂದ್ರ ಸರ್ಕಾರ ಹೇಳಿರುವುದು ಶುದ್ಧ ಸುಳ್ಳು, ಅಂತಿಮವಾಗಿ ಈ ಹೊರೆಯನ್ನು ವ್ಯಾಪಾರಿಗಳು ಗ್ರಾಹಕರ ಮೇಲೇ ಹಾಕುತ್ತಾರೆ ಎಂದರು.



ಅಡುಗೆ ಅನಿಲ ಸಬ್ಸಿಡಿ ನಿಲ್ಲಿಸಿದ್ದಷ್ಟೇ ಅಲ್ಲದೆ ಪೆಟ್ರೋಲ್, ಡೀಸೆಲ್, ಎಲ್.ಪಿ.ಜಿ., ಚಿನ್ನ, ಬೆಳ್ಳಿ ದರ ಹೆಚ್ಚಳ ಮಾಡಿರುವ ಕೇಂದ್ರ ಸರ್ಕಾರ, ಜೀವ ಉಳಿಸುವ ಔಷಧಗಳ ದರವನ್ನೂ ಹೆಚ್ಚಳ ಮಾಡಿ, ಬಡವರ ಬದುಕನ್ನು ಮೂರಾಬಟ್ಟೆ ಮಾಡಿದೆ.

ಬಿಜೆಪಿ ನೇತೃತ್ವದ ಎನ್.ಡಿ.ಎ. ಸರ್ಕಾರದಲ್ಲಿ ಶ್ರೀಮಂತರು ಮಾತ್ರ ಬದುಕಲು ಸಾಧ್ಯ. ಇನ್ನು ಮುಂದೆ ಬಡವರು ಬದುಕುವುದೇ ಕಷ್ಟವಾಗುತ್ತದೆ ಎಂದು ಹೇಳಿದರು.

ಇಂದು ಹಾಲು, ಹಣ್ಣು, ತರಕಾರಿ ಮಾರಾಟ ಮಾಡುವವರೂ ಯುಪಿಐ ಮೂಲಕ ಹಣ ಸ್ವೀಕರಿಸುತ್ತಾರೆ.

ಇದೇ ರೀತಿ ಸರ್ಕಾರ ಶುಲ್ಕ ಹೇರುತ್ತಿದ್ದರೆ ಅವರು ನಗದು ವಹಿವಾಟಿಗೆ ಮರಳುತ್ತಾರೆ. ನೋಟ್ ಬಂದಿ ಕಾಲದಲ್ಲಿ ಎ.ಟಿ.ಎಂ.ಗಳ ಮುಂದೆ ಜನ ಸರತಿ ಸಾಲಿನಲ್ಲಿ ನಿಲ್ಲುತ್ತಿದ್ದರು. ಈಗ ಮತ್ತೆ ಅದೇ ಸ್ಥಿತಿ ನಿರ್ಮಾಣವಾಗಲಿದೆ ಎಂದು ಖಂಡ್ರೆ ಭವಿಷ್ಯ ನುಡಿದಿದ್ದಾರೆ.

ಕೇಂದ್ರ ಸರ್ಕಾರ ಈವರೆಗೆ ನೋಟು ಬಂದಿಯಿಂದ ಆದ ಪ್ರಯೋಜನ ಏನೆಂದು ಬಹಿರಂಗ ಮಾಡಿಲ್ಲ. 500 ಮತ್ತು 1000 ರೂ. ಮೌಲ್ಯದ ಹಳೆಯ ನೋಟುಗಳನ್ನು ಅಮಾನ್ಯಗೊಳಿಸಿ ದೇಶದ ಆರ್ಥಿಕತೆಯನ್ನೇ ನಾಶ ಮಾಡಿತು. ಜೊತೆಗೆ ಜಿ.ಎಸ್.ಟಿ. ಜಾರಿ ಮೂಲಕ ರಾಜ್ಯಗಳ ಸಂಪನ್ಮೂಲ ಕ್ರೋಡೀಕರಣಕ್ಕೇ ಕೊಡಲಿಪೆಟ್ಟು ನೀಡಿತು. ಇದು ದೇಶದ ಪ್ರಗತಿಗೆ ಮಾರಕ ಎಂದರು.

ಕೇಂದ್ರ ಸರ್ಕಾರ ಯುಪಿಐ ವಹಿವಾಟಿಗೆ ಹಲವು ಲೆಕ್ಕಾಚಾರ ನೀಡಿದೆ. ಆದರೆ ಈ ಎಲ್ಲ ಲೆಕ್ಕಾಚಾರ ತಲೆಕೆಳಗಾಗುತ್ತದೆ. ಮತ್ತೆ ಪರೋಕ್ಷ ನಗದು ವಹಿವಾಟು ಆರಂಭವಾಗುತ್ತದೆ.

ಯುಪಿಐ ಶುಲ್ಕದಿಂದ ಡಿಜಿಟಲ್ ಪಾವತಿ ವ್ಯವಸ್ಥೆಗೆ ಹಿನ್ನಡೆಯಾಗುವ ಸಾಧ್ಯತೆ ಇದೆ ಎಂದು ಖಂಡ್ರೆ ಆತಂಕ ವ್ಯಕ್ತಪಡಿಸಿದರು.

ಮುಂಬರುವ ಲೋಕಸಭಾ ಚುನಾವಣೆ ಹೊತ್ತಿಗೆ ಕಪ್ಪುಹಣ ಶೇಖರಣೆ ಕೇಂದ್ರ ಸರ್ಕಾರದ ಗುರಿಯಾಗಿರಬೇಕು ಎಂಬ ಅನುಮಾನ ಮೂಡುತ್ತಿದೆ ಎಂದು ಈಶ್ವರ ಖಂಡ್ರೆ ಹೇಳಿದರು.

Vikrama Vahini Kannada Daily, #204, Forest Layout, Jnanabharathi, Bangalore-560095
PRGI NO: KARKAN/2018/78481
vikramavahini@gmail.com
93535 91145
Printed by B.N. Murali Prasad, Published by Swarna Latha B.N., and Printed at Swarna Graphics, Forest Layout, Jnanabharathi, Bangalore -560059 and Published at Bangalore, Editor: B.N. Murali Prasad., Volume:9, Issue : 165,